ಸಂಪುಟ: 01 ಸಂಚಿಕೆ: 03 ಪುಟ: 04 ಬೆಲೆ: 02 ಶನಿವಾರ ಜೂನ್ 06 2026 ಮೊ: 7411699198/7406928404

# ಅಜಾತ ಶತ್ರು

ಕೊಪ್ಪಳದಿಂದ ಏಕಕಾಲಕ್ಕೆ ಪ್ರಕಟ

ಸತ್ಯದ ಧ್ವನಿ... ಜನರ ನುಡಿ...

ಕನ್ನಡ ದಿನ ಪತ್ರಿಕೆ

ಪ್ರದೀಪಕುಮಾರ
ಸಂಪಾದಕರು




Volume:01 Issue:03Pages:04 Price:02 SATURDAY JUNE 06 2026 RNI NO: KNKAN/26/A4008 E-mail:ajathashathru2026@gmail.com

## ಅಣ್ಣಮ್ಮ ದೇವಿಗೆ ಡಿಕೆಶಿ ವಿಶೇಷ ಪೂಜೆ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಡಿ.ಕೆ. ಶಿವಕುಮಾರ್ ರವರು ಇಂದು ಬೆಂಗಳೂರಿನ ನಗರ ದೇವತೆ ಅಣ್ಣಮ್ಮ ದೇವಿಯ ದೇವಸ್ಥಾನಕ್ಕೆ ತೆರಳಿ ವಿಶೇಷ ಪೂಜೆ ನೆರವೇರಿಸಿದರು.**



ಇಂದು ಬೆಳಿಗ್ಗೆ ಅಣ್ಣಮ್ಮ ದೇವಿಯ ದೇವಸ್ಥಾನಕ್ಕೆ ತೆರಳಿದ ಡಿ.ಕೆ. ಶಿವಕುಮಾರ್ ರವರು ದೇವಸ್ಥಾನದ ಆವರಣದಲ್ಲಿರುವ ಬಿಸಲ್ ಮಾರಮ್ಮ ದೇವಸ್ಥಾನಕ್ಕೆ ಮೊಸರು ಅಭಿಷೇಕ ಮಾಡಿದರು. ನಂತರ ಅಣ್ಣಮ್ಮ ದೇವಿಗೆ ಮಂಗಳಾರತಿ ಬೆಳಗಿ ವಿಶೇಷ ಪೂಜೆ ಸಲ್ಲಿಸಿದರು. ಅಣ್ಣಮ್ಮ ದೇವಿಯ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಣ್ಣಮ್ಮ ದೇವಿ ನಮ್ಮ ನಾಡಿನ ನಗರದ ಗ್ರಾಮ ದೇವತೆ. ತಾಯಿ ಕೃಪೆಯಿಂದ ರಾಜ್ಯದಲ್ಲಿ ಉತ್ತಮ ಮಳೆ, ಬೆಳೆಯಾಗಲಿ ಎಂದು ಬೇಡಿಕೊಂಡಿದ್ದೇನೆ ಎಂದರು. ರಾಜ್ಯದ ಅಭಿವೃದ್ಧಿಗೆ ತಾಯಿ ಅಣ್ಣಮ್ಮ ಆಶೀರ್ವಾದ ಸಿಗಲಿ ಎಂದು ಪ್ರಾರ್ಥಿಸಿದ್ದೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಶಾಸಕ ದಿನೇಶ್ ಗುಂಡೂರಾವ್ ಉಪಸ್ಥಿತರಿದ್ದರು. ಪೂರ್ಣಕುಂಭ ಸ್ವಾಗತ: ನಗರ ದೇವತೆ ಅಣ್ಣಮ್ಮನ ಗುಡಿಗೆ ಆಗಮಿಸಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ಅಣ್ಣಮ್ಮ ದೇವಸ್ಥಾನದ ಆಡಳಿತ ಮಂಡಳಿ ಪೂರ್ಣಕುಂಭ, ಮಂಗಳವಾದ್ಯಗಳ ಮೂಲಕ ಸ್ವಾಗತ ನೀಡಿತು.

### ತೈಲ ಬೆಲೆ ಆಘಾತದಿಂದ ಆರ್ಥಿಕ ಅನಿಶ್ಚಿತತೆ ನಡುವೆಯೂ ರೆಪೊ ದರದಲ್ಲಿ

## ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ

**ಮುಂಬೈ: ಪಶ್ಚಿಮ ಏಷ್ಯಾದಲ್ಲಿ ಮುಂದುವರಿದಿರುವ ಸಂಘರ್ಷ, ಏರಿಕೆಯಾಗಿರುವ ಇಂಧನ ಬೆಲೆಗಳು ಹಾಗೂ ಜಾಗತಿಕ ಸರಬರಾಜು ಸರಪಳಿ ಅಡಚಣೆಗಳಿಂದ ಆರ್ಥಿಕ ಬೆಳವಣಿಗೆ ಮತ್ತು ಹಣದುಬ್ಬರದ ಮೇಲೆ ಹೆಚ್ಚುತ್ತಿರುವ ಅಪಾಯಗಳ ನಡುವೆಯೇ, ಭಾರತೀಯ ರಿಸರ್ವ್ ಬ್ಯಾಂಕ್ ಇಂದು ತನ್ನ ಮಾನದಂಡದ ರೆಪೊ ದರವನ್ನು ನಿರೀಕ್ಷೆಯಂತೆ ಶೇ. 5.25ರಲ್ಲೇ ಯಥಾಸ್ಥಿತಿಯಲ್ಲಿ ಉಳಿಸಿದೆ. ಜೊತೆಗೆ, ವಿದೇಶಿ ಬಂಡವಾಳವನ್ನು ಆಕರ್ಷಿಸಲು ಹಾಗೂ ರೂಪಾಯಿಗೆ ಬೆಂಬಲ ನೀಡಲು ಹಲವು ಕ್ರಮಗಳನ್ನು ಘೋಷಿಸಿದೆ.**



ರೂಪಾಯಿ ಮೌಲ್ಯಕ್ಕೆ ಬೆಂಬಲ ನೀಡುವ ಉದ್ದೇಶದಿಂದ, ಸರ್ಕಾರಿ ಭದ್ರತಾ ಪತ್ರಿಕೆಗಳಲ್ಲಿ ಹೂಡಿಕೆ ಮಾಡುವ ಅರ್ಹ ವಿದೇಶಿ ಹೂಡಿಕೆದಾರರಿಗೆ ಬಡ್ಡಿ ಆದಾಯ ಮತ್ತು ಬಂಡವಾಳ ಲಾಭದ ಮೇಲಿನ ತೆರಿಗೆಗಳನ್ನು ರದ್ದುಪಡಿಸುವುದು, ಅನಿವಾಸಿ ಭಾರತೀಯರ ವಿದೇಶಿ ಕರೆನ್ಸಿ ಠೇವಣಿಗಳಿಗೆ ರಿಯಾಯಿತಿ ಷರತ್ತುಗಳನ್ನು ಒದಗಿಸುವುದು ಹಾಗೂ ಆಯ್ದ ವಿದೇಶಿ ಸಾಲಗಳಿಗೆ ಹೆಡ್ಜಿಂಗ್ ವೆಚ್ಚಕ್ಕೆ ಸಹಾಯಧನ ನೀಡುವುದು ಸೇರಿದಂತೆ ಹಲವು ಕ್ರಮಗಳನ್ನು ಪ್ರಕಟಿಸಲಾಗಿದೆ. ಹಣಕಾಸು ನೀತಿ ಸಮಿತಿ ಏಕಮತದಿಂದ ರೆಪೊ ದರವನ್ನು ಶೇ. 5.25ರಲ್ಲೇ ಉಳಿಸುವುದಕ್ಕೂ, ತನ್ನ ತಟಸ್ಥ ನಿಲುವನ್ನು ಮುಂದುವರಿಸುವುದಕ್ಕೂ ಮತ ಚಲಾಯಿಸಿತು.

ಸುದ್ದಿಗೋಷ್ಠಿಯಲ್ಲಿ ಗವರ್ನರ್ ಸಂಜಯ್ ಮಲ್ಹೋತ್ರಾ ಅವರು, ಭಾರತವು ಹಿಂದಿನ ಬಿಕ್ಕಟ್ಟುಗಳಿಗಿಂತ ಬಲವಾದ ಸ್ಥೂಲ ಆರ್ಥಿಕ (ಮ್ಯಾಕ್ರೋ ಆರ್ಥಿಕ) ಅಡಿಪಾಯದೊಂದಿಗೆ ಈ ಜಾಗತಿಕ ಅಶಾಂತಿಯ ಹಂತವನ್ನು ಪ್ರವೇಶಿಸಿದೆ ಎಂದು ಹೇಳಿದ್ದಾರೆ. ಆದರೆ, ಹೆಚ್ಚುತ್ತಿರುವ ಭೌಗೋಳಿಕ-ರಾಜಕೀಯ ಉದ್ವಿಗ್ನತೆ, ಏರಿದ ಸರಕು ಬೆಲೆಗಳು ಮತ್ತು ಸರಬರಾಜು ಅಡಚಣೆಗಳು ಆರ್ಥಿಕ ಭವಿಷ್ಯದ ಮೇಲೆ ಅನಿಶ್ಚಿತತೆಯನ್ನು ಉಂಟುಮಾಡುತ್ತಿವೆ ಎಂದು ಎಚ್ಚರಿಸಿದರು. ಜಾಗತಿಕ ಪರಿಸ್ಥಿತಿ ಹದಗೆಟ್ಟಿದೆ ಎಂಬುದನ್ನು ಸಮಿತಿಯು ಗಮನಿಸಿದೆ ಎಂದು ಅವರು ಹಣಕಾಸು ನೀತಿ ನಿರ್ಧಾರವನ್ನು ಪ್ರಕಟಿಸುವ ವೇಳೆ ಹೇಳಿದರು. ಹೆಚ್ಚಿನ ಸ್ಪಷ್ಟತೆ ಸಿಗುವವರೆಗೆ ಕಾಯುವುದು ಸೂಕ್ತ ಎಂದು ಸಮಿತಿ ಅಭಿಪ್ರಾಯಪಟ್ಟಿದೆ ಎಂದರು.

ಹಣದುಬ್ಬರದ ಮೂಲಭೂತ ಒತ್ತಡಗಳು ಇನ್ನೂ ನಿಯಂತ್ರಣದಲ್ಲಿದ್ದರೂ, ಹೆಚ್ಚುತ್ತಿರುವ ವೆಚ್ಚಗಳು ವೇತನ ಮತ್ತು ಹಣದುಬ್ಬರ ನಿರೀಕ್ಷೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ. ಜೊತೆಗೆ, ಸಾಮಾನ್ಯಕ್ಕಿಂತ ಕಡಿಮೆ ಮಳೆಯ ಮುನ್ಸೂಚನೆ ಹಾಗೂ ಸಂಭವನೀಯ ಪರಿಸ್ಥಿತಿಯು ಮುಂದಿನ ತಿಂಗಳುಗಳಲ್ಲಿ ಆಹಾರ ಬೆಲೆಗಳ ಮೇಲೆ ಒತ್ತಡ ಉಂಟುಮಾಡಬಹುದು ಎಂದು ತಿಳಿಸಿದೆ. ಪ್ರಸಕ್ತ ಹಣಕಾಸು ವರ್ಷದ ಆರ್ಥಿಕ ಬೆಳವಣಿಗೆಯ ನಿರೀಕ್ಷೆಯನ್ನು ಕಡಿತಗೊಳಿಸಿದ್ದು, 2026-27ನೇ ಸಾಲಿನ ನೈಜ ಜಿಡಿಪಿ ಬೆಳವಣಿಗೆ ದರವನ್ನು ಶೇ. 6.6 ಎಂದು ಅಂದಾಜಿಸಿದೆ. ಇದು ಏಪ್ರಿಲ್‌ನಲ್ಲಿ ನೀಡಿದ್ದ ಶೇ. 6.9ರ ಮುನ್ಸೂಚನೆಗಿಂತ ಕಡಿಮೆಯಾಗಿದೆ. 2025-26ನೇ ಸಾಲಿಗೆ ಅಂದಾಜಿಸಲಾದ ಶೇ. 7.6ರ ಬೆಳವಣಿಗೆಗಿಂತಲೂ ಇದು ಕಡಿಮೆ. 2026-27ರಲ್ಲಿ ಹಣದುಬ್ಬರವು ಶೇ. 5.1ಕ್ಕೆ ಏರಿಕೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ. ಮೂರನೇ ತ್ರೈಮಾಸಿಕದಲ್ಲಿ ಅದು ಶೇ. 5.9ಕ್ಕೆ ಗರಿಷ್ಠ ಮಟ್ಟ ತಲುಪಿ ಬಳಿಕ ಇಳಿಕೆಯಾಗುವ ನಿರೀಕ್ಷೆಯಿದೆ. ಇದಕ್ಕೂ ಮೊದಲು ವಾರ್ಷಿಕ ಚಿಲ್ಲರೆ ಹಣದುಬ್ಬರವನ್ನು ಶೇ. 4.6 ಎಂದು ಅಂದಾಜಿಸಲಾಗಿತ್ತು. ಮೂಲಭೂತ ಹಣದುಬ್ಬರವನ್ನು ಶೇ. 4.7 ಎಂದು ಅಂದಾಜಿಸಲಾಗಿದ್ದು, ಇದು ಹಿಂದಿನ ಶೇ. 4.4ರ ಅಂದಾಜಿಗಿಂತ ಹೆಚ್ಚಾಗಿದೆ.ಒಟ್ಟಾರೆ ಹಣದುಬ್ಬರ ಯ ಶೇ. 4ರ ಗುರಿ ಮಿತಿಯೊಳಗೆ (ಶೇ. 2ರಿಂದ 6ರ ಸಹಿಷ್ಣುತೆ ವ್ಯಾಪ್ತಿಯಲ್ಲಿ) ಇದ್ದರೂ, ಜಾಗತಿಕ ಇಂಧನ ಬೆಲೆಗಳ ಏರಿಕೆ ಮತ್ತು ಸರಬರಾಜು ಆಘಾತಗಳು ವೇತನ ಹಾಗೂ ಹಣದುಬ್ಬರ ನಿರೀಕ್ಷೆಗಳ ಮೇಲೆ ದ್ವಿತೀಯ ಹಂತದ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ಆರ್‌ಬಿಐಎಚ್ಚರಿಸಿದೆ.

## ಶೇ.50 ರಿಯಾಯಿತಿಯಲ್ಲಿ ದಂಡ ಪಾವತಿಸಲು ವಾಹನ ಸವಾರರಿಗೆ ಮತ್ತೊಂದು ಅವಕಾಶ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ರಾಜ್ಯದಲ್ಲಿ ನೂತನವಾಗಿ ರಚನೆಯಾಗಿರುವ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ವಾಹನ ಸವಾರರಿಗೆ ಸಿಹಿಸುದ್ದಿ ನೀಡಿದೆ. ಈ ಹಿಂದೆ ಜಾರಿಯಲ್ಲಿದ್ದ ಶೇ.50ರಷ್ಟು ಸಂಚಾರ ದಂಡ ರಿಯಾಯಿತಿಯನ್ನು ಮತ್ತೆ ಪುನಃಸ್ಥಾಪಿಸಲಾಗಿದೆ. ರಾಜ್ಯ ಸರ್ಕಾರವು ಈ ಬಗ್ಗೆ ಮಹತ್ವದ ಘೋಷಣೆ ಮಾಡಿ ಆದೇಶ ಹೊರಡಿಸಿದೆ.**



ರಾಜ್ಯ ಸರ್ಕಾರದ ನಿರ್ಧಾರದ ಪ್ರಕಾರ, ವಾಹನ ಸವಾರರು ಬಾಕಿ ಉಳಿದಿರುವ ಸಂಚಾರ ದಂಡದ ಮೇಲೆ ಶೇ.50 ರಿಯಾಯಿತಿ ಪಡೆದುಕೊಳ್ಳಲು ಮತ್ತೆ ಅವಕಾಶ ದೊರೆತಿದೆ. ಈ ಹಿಂದೆ ಸರ್ಕಾರ ನೀಡಿದ್ದ ಈ ರಿಯಾಯಿತಿಗೆ ವಾಹನ ಸವಾರರಿಂದ ಭರ್ಜರಿ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆ ಯಶಸ್ಸಿನ ಹಿನ್ನೆಲೆಯಲ್ಲಿ ಮತ್ತೊಮ್ಮೆ ಈ ಯೋಜನೆಯನ್ನು ಜಾರಿಗೆ ತರಲಾಗಿದೆ ಎಂದು ಸರ್ಕಾರ ಹೇಳಿದೆ. 20 ದಿನಗಳ ಕಾಲಾವಕಾಶ :ಈ ರಿಯಾಯಿತಿ ಯೋಜನೆಯಡಿ ವಾಹನ ಸವಾರರು ತಮ ಬಾಕಿ ದಂಡವನ್ನು ಶೇ.50 ರಿಯಾಯಿತಿಯೊಂದಿಗೆ ಪಾವತಿಸಲು 20 ದಿನಗಳ ಕಾಲಾವಕಾಶ ನೀಡಲಾಗಿದೆ. ಈ ಅವಧಿಯಲ್ಲಿ ದಂಡ ಪಾವತಿಸಿದರೆ ಅರ್ಧದಷ್ಟು ಮೊತ್ತವನ್ನು ಉಳಿಸಿಕೊಳ್ಳಬಹುದು. ಇದು ವಾಹನ ಸವಾರರಿಗೆ ದೊಡ್ಡ ಆರ್ಥಿಕ ಸಹಾಯವಾಗುವ ನಿರೀಕ್ಷೆ ಇದೆ. ಸಾರಿಗೆ ಇಲಾಖೆಯ ಮೂಲಗಳ ಪ್ರಕಾರ, ರಾಜ್ಯದಲ್ಲಿ ಲಕ್ಷಾಂತರ ವಾಹನ ಸವಾರರು ವಿವಿಧ ಕಾರಣಗಳಿಂದ ಸಂಚಾರ ನಿಯಮ ಉಲ್ಲಂಘನೆಗೆ ದಂಡ ಬಾಕಿ ಉಳಿಸಿಕೊಂಡಿದ್ದಾರೆ. ಹಿಂದಿನ ರಿಯಾಯಿತಿ ಯೋಜನೆಯಲ್ಲಿ ಸಾವಿರಾರು ಜನರು ಲಾಭ ಪಡೆದಿದ್ದರು. ಈ ಬಾರಿ ಇನ್ನಷ್ಟು ಜನರು ಇದರ ಸದುಪಯೋಗ ಪಡೆಯುವರು ಎಂದು ಅಂದಾಜಿಸಲಾಗಿದೆ. ಈ ನಿರ್ಧಾರವು ವಿಶೇಷವಾಗಿ ಸಾಮಾನ್ಯ ಮಧ್ಯಮ ವರ್ಗದ ವಾಹನ ಸವಾರರಿಗೆ ನೆರವಾಗಲಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಈ ಯೋಜನೆ ಅನ್ವಯವಾಗುತ್ತದೆ. ದಂಡ ಪಾವತಿಗೆ ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ವಿಧಾನಗಳನ್ನು ಬಳಸಬಹುದು. ಪರಿವಹಣೆ ಇಲಾಖೆಯ ವೆಬ್‌ಸೈಟ್ ಅಥವಾ ಪರಿವಹಣೆ ಕಚೇರಿಗಳ ಮೂಲಕ ದಂಡ ಪಾವತಿಸಬಹುದು. ಸಾರಿಗೆ ಸಚಿವರು ಈ ಬಗ್ಗೆ ಮಾತನಾಡುತ್ತಾ, ವಾಹನ ಸವಾರರ ಸಮಸ್ಯೆಗಳನ್ನು ಗಮನಿಸಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

## ಪರಿಸರ ನಾಶದಿಂದ ಸಕಲ ಜೀವರಾಶಿಗಳು ನಾಶ ಖಂಡಿತ :ಮುಖ್ಯ ಶಿಕ್ಷಕ ಚಿನ್ನುಭಾಷಾ,,

ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಭೂಮಿಯ ಮೇಲೆ ಪರಿಸರ ನಾಶವಾದರೇ ಸಕಲ ಜೀವಿಗಳ ನಾಶ ಖಂಡಿತ ನಾಶವಾಗುತ್ತದೆ ಆದ್ದರಿಂದ ಪ್ರತಿಯೊಬ್ಬರು ಪರಿಸರ ರಕ್ಷಣೆ ಮಾಡುವ ಮೂಲಕ ಸಕಲ ಜೀವಿಗಳನ್ನು ಸಂರಕ್ಷಿಸಲು ಮುಂದಾಗಬೇಕು ಎಂದು ಶಾಲೆಯ ಮುಖ್ಯ ಶಿಕ್ಷಕ ಚಿನ್ನುಭಾಷಾ ಅತ್ತಾರ ಹೇಳಿದರು.**



ಅವರು ವಜ್ರಬಂಡಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಮನುಷ್ಯ ತನ್ನ ಅಗತ್ಯಗಳಿಗಾಗಿ ಭೂಮಿಯಲ್ಲಿನ ಗಿಡ, ಮರಗಳನ್ನು ನಾಶ ಮಾಡುತ್ತಿರುವುದರಿಂದ ವಾಯು ಮಾಲಿನ್ಯ, ಜಲ ಮಾಲಿನ್ಯ, ಪರಿಸರ ಮಾಲಿನ್ಯ ಹಾಳಾಗುತ್ತಿದ್ದು, ಪರಿಸರ ಸಂರಕ್ಷಣೆ ಮಾಡಿದಾಗ ಮಾತ್ರ ಸಕಲ ಜೀವಿಗಳು ಬದಕಲು ಸಾಧ್ಯ ಆದ್ದರಿಂದ ಪ್ರತಿಯೊಬ್ಬರು ಪರಿಸರ ರಕ್ಷಣೆಗೆ ಮುಂದಾಗಬೇಕು ಎಂದರು.

ಕುರಿತು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹನಮಂತಪ್ಪ ಯಂಕಂಚಿ ಪರಿಸರ ಉಳುವಿನ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ರಾಘವೇಂದ್ರ ಗೋನಾಳ, ಮಲ್ಲಿಕಾರ್ಜುನ ಇಟಗಿ, ತಾಹೇರಾ ಬೇಗಮ್, ಹನೀಫಾ ಬೇಗಮ್, ಕುಮಾರಿ ಐಶ್ವರ್ಯ ಅಕ್ಕಸಾಲಿಗರ, ಗ್ರಂಥ ಪಾಲಕ ರಂಗಪ್ಪ, ಪಂಚಾಯತಿ ಸಿಬ್ಬಂದಿಗಳಾದ ದುರಗಪ್ಪ, ನೀಲಪ್ಪ ಹಾಗೂ ಅಂಗನವಾಡಿ ಕಾರ್ಯಕರ್ತೆಯರಾದ ಶಿವಮ್ಮ ಪೊಲೀಸ್ ಪಾಟೀಲ್, ಹಾಗೂ ವೇಧಾ ದೇಸಾಯಿ ಹಾಗೂ ಪತ್ರಕರ್ತ ಮೌನೇಶ ಮದ್ಲುರು, ಮಂಜುನಾಥ ಪೂಜಾರ್, ರಾಮಪ್ಪ ಶ್ಯಾಡ್ಲಗೇರಿ ಉಪಸ್ಥಿತರಿದ್ದರು.

## ಗ್ರಾಮೀಣ 'ಪಡಿತರ' ವಿತರಕರ ಸಂಘಕ್ಕೆ ಆಯ್ಕೆ

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ನಗರದ ಪ್ರತಿಭಾ ಸ್ಕೂಲ್ ನಲ್ಲಿ ನಗರ ಮತ್ತು ಗ್ರಾಮೀಣ ಪಡಿತರ ವಿತರಕರ ಸಂಘದ ತಾಲೂಕ ಪಧಾದಿಕಾರಿಗಳನ್ನು ಆಯ್ಕೆ ಮಾಡಲಾಯಿತು.**



ಪಡಿತರ ವಿತರಕರ ಸರ್ವ ಸದಸ್ಯರು ಸೇರಿ ಒಮ್ಮತದಿಂದ ಜಿಲ್ಲಾದ್ಯಕ್ಷ ಮಲ್ಲಪ್ಪ ತುಭಾಕಿಯ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಪುಟ್ಟಮ್ಮ ಗಿಡ್ಡಿ ನೇತೃತ್ವದಲ್ಲಿ ಗೌರವಾಧ್ಯಕ್ಷ ಗವಿಶಿದ್ಧಪ್ಪ ಪತ್ತಾರ, ಅಧ್ಯಕ್ಷರಾಗಿ ಶರಣಪ್ಪ ಹುಡೇಜಾಲಿ, ಕಾರ್ಯಾಧ್ಯಕ್ಷರಾಗಿ: ದಾನನಗೌಡ್ರ ಹೆರೂರ, ಉಪಾಧ್ಯಕ್ಷರಾಗಿ ತಾಹೇರ್, ಮಹ್ಮದ್ ಸದಸ್ಯರಾಗಿ ಕಳಕಪ್ಪ ಗುಳದಾಳ, ಸರಸ್ವತಿ ನ್ಯಾಯಬೆಲೆ ಅಂಗಡಿ ವಿರುಪಾಪುರ, ಶೇಕ್ಷಾವಲಿ ಸಲೀಂಸಾಬ ನ್ಯಾಯಬೆಲೆ ಅಂಗಡಿ, ನಿಂಗಪ್ಪ ಬೆಟ್ಟದ ಚಿಕ್ಕಬೆಣಕಲ್, ಪ್ರಧಾನ ಕಾರ್ಯದರ್ಶಿಯಾಗಿ ಮಹ್ಮದ್ ಸಾಬ್, ಸಹ ಕಾರ್ಯದರ್ಶಿಯಾಗಿ ವಿರುಪಾಕ್ಷಪ್ಪ ಹಣವಾಳ, ರಾಜಲಿಂಗ, ಸುಣ್ಣದ, ಚಂದ್ರು ಮಲಕನ ಮರಡಿ, ಸಂಘಟನಾ ಕಾರ್ಯದರ್ಶಿಯಾಗಿ ಮುದಿಯಪ್ಪ ಹೋಸ್ಕೆರಾ, ಸರಿತಾ ಸತೀಶ್, ಖಜಾಂಚಿಯಾಗಿ ಸುರೇಶ ಜವಳಿ, ಅಶೋಕ ಜವಳಿ, ಕಾರ್ಯಕಾರಿ ಸಮಿತಿ ಸದಸ್ಯೆಯರಾಗಿ ಪುಟ್ಟಮ್ಮ ಗಿಡ್ಡಿ, ಶಬ್ಬಿರ್ ಹುಸೇನ್ ಸಾಣಾಪೂರ, ರಾಜಣ್ಣ, ಗಂಗಮ್ಮ ಹಿರೇಬೆಣಕಲ್, ಲಕ್ಷ್ಮಣಗೌಡ್ರ, ಮುಕ್ಕುಂಪಿ ಉಳಿದ ನ್ಯಾಯಬೆಲೆ ಅಂಗಡಿ ಸಮಿತಿ ಸದಸ್ಯರು. ಬಸವರಾಜ ವಡ್ಡರಹಟ್ಟಿ, ಮೌನೇಶ ಪತ್ತಾರ, ನೇತ್ರರಾಜ ಬಸವನದುರ್ಗ, ಶ್ರೀನಿವಾಸ ಬಾಪುರೆಡ್ಡಿ, ಕೋಟೇಶ್ವರ ರಾವ್ ಶ್ರೀರಾಮ ನಗರ, ಬಸವರಾಜ ಮರಕುಂಬಿ, ಸಂಗಮೇಶ ಕೇಸರಟ್ಟಿ ಇವರನ್ನು ಜಿಲ್ಲಾಧ್ಯಕ್ಷ ಮಲ್ಲಪ್ಪ ತುಭಾಕಿಯವರ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪುಟ್ಟಮ್ಮ ಗಿಡ್ಡಿ, ನೇತೃತ್ವದಲ್ಲಿ ಸಭೆ ನಡೆಸಿ ತಾಲೂಕ ಪಧಾದಿಕಾರಿಗಳನ್ನು ಆಯ್ಕೆ ಮಾಡಲಾಯಿತು.

## ಪ್ರಾಮಾಣಿಕತೆ ಜೊತೆಗೆ ದಕ್ಷ ಪೊಲೀಸ್ ಅಧಿಕಾರಿಯಾದ ನಾಗಪ್ಪ ಕನಕಾಪುರ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಪೊಲೀಸ್ ಇಲಾಖೆಯಲ್ಲಿ ಪ್ರಾಮಾಣಿಕತೆ, ಕರ್ತವ್ಯನಿಷ್ಠೆ ಹಾಗೂ ಜನಸ್ನೇಹಿ ಸೇವೆಯ ಮೂಲಕ ವಿಶಿಷ್ಟ ಗುರುತಿಸಿಕೊಂಡ ನಿವೃತ್ತ ಪಿ.ಎಸ್.ಐ ನಾಗಪ್ಪ ಕನಕಾಪೂರ ಅವರ ಅಭಿನಂದನಾ ಮತ್ತು ಕೃತಜ್ಞತಾ ಸಮರ್ಪಣಾ ಸಮಾರಂಭವು ನಗರದ ಬಾಲಾಜಿ ಫಂಕ್ಷನ್ ಹಾಲ್‌ನಲ್ಲಿ ಅದ್ದೂರಿಯಾಗಿ ನೆರವೇರಿತು.**







ಕಾರ್ಯಕ್ರಮವನ್ನು ಅತಿಥಿಗಳು ಹಾಗೂ ಗಣ್ಯರು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿದರು. ಬಳಿಕ ನಾಗಪ್ಪ ಕನಕಾಪೂರ ದಂಪತಿಗಳನ್ನು ಕುಟುಂಬಸ್ಥರು, ಸ್ನೇಹಿತರು ಹಾಗೂ ಹಿತೈಷಿಗಳು ಹೂವಿನ ಮಳೆಯೊಂದಿಗೆ ಭವ್ಯವಾಗಿ ಸ್ವಾಗತಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಬಿ.ಎಸ್. ಸುರೇಶ ಅವರು, "ನಾಗಪ್ಪ ಕನಕಾಪೂರ ಅವರು ಪೊಲೀಸ್ ಇಲಾಖೆಯಲ್ಲಿ ಕಳಂಕ ರಹಿತ ಸೇವೆ ಸಲ್ಲಿಸಿ ಸಮಾಜಕ್ಕೆ ಮಾದರಿಯಾಗಿದ್ದಾರೆ. ಜನರ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡಿ ನ್ಯಾಯ ಒದಗಿಸಿದ ಅವರ ಸೇವೆ ಎಲ್ಲರಿಗೂ ಪ್ರೇರಣಾದಾಯಕ," ಎಂದು ಅಭಿಪ್ರಾಯಪಟ್ಟರು.

ಹಿರಿಯ ಸಾಹಿತಿ ಮಹಾಂತೇಶ ಮಲ್ಲನಗೌಡರ ಮಾತನಾಡಿ, "ನಾಗಪ್ಪ ಅವರು ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಸಾರ್ವಜನಿಕರ ಅಪಾರ ಮೆಚ್ಚುಗೆಗೆ ಪಾತ್ರರಾಗಿದ್ದರು. ಅಪರಾಧ ತಡೆಗಟ್ಟುವ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮಗಳು, ಶಾಂತಿ ಸಭೆಗಳು ಹಾಗೂ ಕಾನೂನು ಅರಿವು ಮೂಡಿಸುವ ಕಾರ್ಯಗಳ ಮೂಲಕ ಗ್ರಾಮೀಣ ಜನರ ಮನಸ್ಸಿನಲ್ಲಿ ಅಚ್ಚಳಿಯದ ಸ್ಥಾನ ಪಡೆದಿದ್ದಾರೆ," ಎಂದು ಶ್ಲಾಘಿಸಿದರು. ಹಿರಿಯರಾದ ಕೊಟ್ರಬಸಯ್ಯ ಹಾಗೂ ಪ್ರಾಚಾರ್ಯ ಡಾ. ಮಲ್ಲಪ್ಪ ಅವರು ನಾಗಪ್ಪ ಅವರ ಪೊಲೀಸ್ ಸೇವೆ ಹಾಗೂ ಸಾಮಾಜಿಕ ಕಾರ್ಯಗಳನ್ನು ಸ್ಮರಿಸಿ ಅಭಿನಂದಿಸಿದರು.

ನಿವೃತ್ತ ಅಧಿಕಾರಿ ನಾಗಪ್ಪ ಕನಕಾಪೂರ ಮಾತನಾಡಿ, "ನನ್ನ ಸೇವಾ ಅವಧಿಯಲ್ಲಿ ಮಾರ್ಗದರ್ಶನ ಹಾಗೂ ಸಹಕಾರ ನೀಡಿದ ಇಲಾಖೆಯ ಮೇಲಾಧಿಕಾರಿಗಳು, ಸಹೋದ್ಯೋಗಿಗಳು ಮತ್ತು ಸಾರ್ವಜನಿಕರಿಗೆ ಹೃತ್ಪೂರ್ವಕ ಧನ್ಯವಾದಗಳು," ಎಂದು ತಿಳಿಸಿದರು.

ಇದೇ ವೇಳೆ ನಾಗಪ್ಪ ಕನಕಾಪೂರ ಅವರ ಜೀವನ ಸಾಧನೆ ಕುರಿತ ಸಾಕ್ಷ್ಯಚಿತ್ರ ಪ್ರದರ್ಶನಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಇಲಾಖೆಯ ಅಧಿಕಾರಿಗಳು, ಸ್ನೇಹಿತರು, ಕುಟುಂಬಸ್ಥರು ಹಾಗೂ ಗ್ರಾಮಸ್ಥರು ಅವರನ್ನು ಸನ್ಮಾನಿಸಿ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ರಾಘವೇಂದ್ರ ಆಚಾರ್ಯ, ಆನಂದ ಸ್ವಾಮೀಜಿ, ಮಹಾಂತೇಶಗೌಡ ಪಾಟೀಲ್, ವೆಂಕಟೇಶ ಬಾರಕೇರ, ಹೊನ್ನೂರಸಾಬ್ ನದಾಫ್, ಮಲ್ಲಿಕಾರ್ಜುನ ಶಿಕ್ಷಕರು, ಕರಿಯಪ್ಪ, ಬಾಲಚಂದ್ರ, ಬಸವರಾಜ ಕೊಪ್ಪಳ, ಬಿ.ಎನ್. ಹೊರಪೇಟಿ, ನರೇಂದ್ರ ಪಾಟೀಲ್, ಪ್ರಿಯದರ್ಶಿನಿ ಮುಂಡರಗಿಮಠ, ದಯಾನಂದ, ಮಾರುತಿ ಪೂಜಾರ, ಹನುಮಂತಪ್ಪ ಕನಕಾಪೂರ ಸೇರಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು, ಸಹೋದ್ಯೋಗಿಗಳು, ಸ್ನೇಹಿತರು, ಗ್ರಾಮಸ್ಥರು ಹಾಗೂ ಯುವಕರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಮಲ್ಲಿಕಾರ್ಜುನ ಹಾಗೂ ಬಸವರಾಜ ಹೂಗಾರ ಅವರಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಮಾರಂಭಕ್ಕೆ ಮತ್ತಷ್ಟು ಮೆರುಗು ತಂದವು.

## ರಾಮಲಿಂಗಾರೆಡ್ಡಿ ಅವರ ಜೊತೆ ಚರ್ಚಿಸಿ ಸಮಸ್ಯೆ ಬಗೆಹರಿಸುತ್ತೇನೆ :ಸಿಎಂ ಡಿಕೆಶಿ

ಅ.ಶ. ಸುದ್ದಿ ಬೆಂಗಳೂರು

**ಬೆಂಗಳೂರು: ಸಚಿವ ರಾಮಲಿಂಗಾರೆಡ್ಡಿ ಅವರ ಜೊತೆ ಚರ್ಚೆ ಮಾಡಿ ಗೊಂದಲವನ್ನು ಬಗೆ ಹರಿಸುತ್ತೇನೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ನಗರದಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಮಲಿಂಗಾರೆಡ್ಡಿ ತಮ ಸಹೋದ್ಯೋಗಿಯಾಗಿದ್ದು, ಪಕ್ಷದ ಹಿರಿಯ ನಾಯಕರು ಹಳ್ಳಿಗೆ ಹೋಗಿ ಕೆಲಸ ಮಾಡಲಾಗುವುದಿಲ್ಲ,ಬೇರೆಯೇ ಖಾತೆ ಕೊಡ ಬೇಕು ಎಂಬುದು ಅವರ ಅಭಿಪ್ರಾಯ. ಅವರ ಜೊತೆ ಚರ್ಚೆ ಮಾಡುತ್ತೇನೆ. ಗೊಂದಲವನ್ನು ಬಗೆ ಹರಿಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.**



ರಾಮಲಿಂಗಾರೆಡ್ಡಿ ತಮ ಉತ್ತಮ ಸ್ನೇಹಿತರು ಹಾಗೂ ಆತೀಯರು ಎಂದು ಪುನರುಚ್ಚರಿಸಿದ್ದಾರೆ. ರಾಮಲಿಂಗಾರೆಡ್ಡಿಯವರ ರಾಜೀನಾಮೆ ಹಿನ್ನೆಲೆಯಲ್ಲಿ ಕೆಲ ಬೆಂಬಲಿಗರು ಬಹಿರಂಗ ಹೇಳಿಕೆ ನೀಡುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಡಿ.ಕೆ.ಶಿವಕುಮಾರ್ ಪಕ್ಷದಲ್ಲಿ ಶಿಸ್ತು ಮುಖ್ಯ ಎಂದಿದ್ದಾರೆ.ಮತ್ತೊಂದೆಡೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ರಾಮಲಿಂಗಾರೆಡ್ಡಿಯವರು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು. ಅವರ ಜೊತೆ ಮಾತನಾಡಿ ಸಮಸ್ಯೆ ಬಗೆ ಹರಿಸಲಾಗುವುದು ಎಂದಿದ್ದಾರೆ. ರಾಹುಲ್‌ಗಾಂಧಿ ಭೇಟಿ ನೀಡುತ್ತಿರುವ ಸಂದರ್ಭದಲ್ಲಿ ಮುಜುಗರ ಆಗುತ್ತಿರುವ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ–ಕಾರಣದಲ್ಲಿ ಈ ರೀತಿ ಎಲ್ಲಾ ನಡೆಯುತ್ತದೆ. ಇಂದು ರಾಜ್ಯಸಭೆ ಮತ್ತು ವಿಧಾನಪರಿಷತ್ ನಾಮಪತ್ರ ಸಲ್ಲಿಸುವ ಪ್ರಕ್ರಿಯೆಗಳು ನಡೆಯುತ್ತಿವೆ. ನಾಳೆ ರಾಮಲಿಂಗಾರೆಡ್ಡಿ ಅವರ ಜೊತೆ ಚರ್ಚೆ ಮಾಡಿ ಸಮಸ್ಯೆ ಬಗೆ ಹರಿಸಲಾಗುವುದು ಎಂದರು. ಇದೇ ವೇಳೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಹೈಕಮಾಂಡ್ ನಾಯಕರು, ರಾಮಲಿಂಗಾರೆಡ್ಡಿ ಅವರ ಜೊತೆ ಚರ್ಚೆ ಮಾಡಿ ಗೊಂದಲ ಬಗೆ ಹರಿಸುತ್ತಾರೆ. ಅವರು ಪಕ್ಷಕ್ಕೆ ಮತ್ತು ರಾಜ್ಯಕ್ಕೆ ಬಹುಮುಖ್ಯವಾಗಿ ಬೇಕಾಗಿದ್ದಾರೆ. ಅವರ ಅನುಭವವನ್ನು ಬಳಸಿಕೊಳ್ಳಲಾಗುತ್ತದೆ. ಕಾಂಗ್ರೆಸ್‌ನಲ್ಲಿ ಯಾವುದೇ ಗೊಂದಲವಿಲ್ಲ ಎಂದು ಸ್ಪಷ್ಟಪಡಿಸಿದರು.

## ಸಂವಿಧಾನ ತಜ್ಞ ಸುಭಾಷ್ ಕಶ್ಯಪ್ ನಿಧನ

ಅ.ಶ. ಸುದ್ದಿ ನವದೆಹಲಿ

**ನವದೆಹಲಿ: ಮಾಜಿ ಲೋಕಸಭಾ ಪ್ರಧಾನ ಕಾರ್ಯದರ್ಶಿ ಮತ್ತು ಸಾಂವಿಧಾನಿಕ ತಜ್ಞ ಸುಭಾಷ್ ಸಿ ಕಶ್ಯಪ್ ಅವರು ದೀರ್ಘಕಾಲದ ಅನಾರೋಗ್ಯದ ನಂತರ ನಿಧನರಾದರು. ಅವ–ರಿಗೆ 97 ವರ್ಷ ವಯಸ್ಸಾಗಿತ್ತು. ಕಶ್ಯಪ್ ಅವರ ಸೈನಿಕ್ ಫಾರ್ಮ್ ನಿವಾಸದಲ್ಲಿ ಅವರು ನಿಧನರಾದರು ಎಂದು ಲೋಕಸಭಾ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.ಅವರು ವಯೋಸಹಜ ಸಮಸ್ಯೆಗಳಿಂದ ಬಳಲುತ್ತಿದ್ದರು ಮತ್ತು ಹೃದಯ–ಶ್ವಾಸಕೋಶ ಸ್ತಂಭನದಿಂದ ನಿಧನರಾದರು ಎಂದು ಅವರು ಹೇಳಿದರು.**



ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪಾಧ್ಯಕ್ಷ ಸಿ ಪಿ ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ ಮತ್ತು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಅವರ ನಿಧನಕ್ಕೆ ಸಂತಾಪ ಸೂಚಿಸಿದರು, ಸಂವಿಧಾನವನ್ನು ವ್ಯಾಖ್ಯಾನಿಸುವಲ್ಲಿ ಮತ್ತು ಕಾನೂನುಗಳನ್ನು ರಚಿಸುವಲ್ಲಿ ಅವರ ಪಾತ್ರವನ್ನು ಅವರು ಸ್ಮರಿಸಿದರು. ರಾಷ್ಟ್ರಪತಿ ಮುರ್ಮು ತಮ್ಮ ಸಂದೇಶದಲ್ಲಿ, ಅವರು ನಮ್ಮ ಸಂವಿಧಾನದ ಅಧ್ಯಯನ ಮತ್ತು ನಮ್ಮ ಸಂಸದೀಯ ವ್ಯವಸ್ಥೆಯ ಅಭಿವೃದ್ಧಿಯನ್ನು ತಮ್ಮ ಪಾಂಡಿತ್ಯ ಮತ್ತು ಒಳನೋಟದಿಂದ ಶ್ರೀಮಂತಗೊಳಿಸಿದರು. ನಾನು ಅವರ ಕುಟುಂಬಕ್ಕೆ ನನ್ನ ಆಳವಾದ ಸಂತಾಪವನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿದರು. ವಿ–ಪಿ ರಾಧಾಕೃಷ್ಣನ್ ಅವರು ಒಬ್ಬ ಶ್ರೇಷ್ಠ ಸಾಂವಿಧಾನಿಕ ತಜ್ಞ ಮತ್ತು ಗಣ್ಯ ವಿದ್ವಾಂಸರಾಗಿ, ಭಾರತದ ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವದ ತಿಳುವಳಿಕೆಗೆ ಕಶ್ಯಪ್ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ ಎಂದು ಹೇಳಿದರು.ಕಶ್ಯಪ್ ಭಾರತದ ಅಗ್ರಗಣ್ಯ ಸಾಂವಿಧಾನಿಕ ವಿದ್ವಾಂಸರಲ್ಲಿ ಒಬ್ಬರು ಎಂದು ಪ್ರಧಾನಿ ಮೋದಿ ಹೇಳಿದರು, ಅವರ ಕೊಡುಗೆಗಳು ಸಂಸದೀಯ ಮತ್ತು ಸಾಂವಿಧಾನಿಕ ಚರ್ಚೆಗೆ ಸಮಾಜವನ್ನು ಶ್ರೀಮಂತಗೊಳಿಸಿದವು. ಕಶ್ಯಪ್ ಅವರು ಮಾಜಿ ರಾಷ್ಟ್ರಪತಿ ರಾಮ್ ನಾಥ್ ಕೋವಿಂದ್ ನೇತೃತ್ವದ ಏಕಕಾಲಿಕ ಚುನಾವಣೆಗಳ ಕುರಿತು ಕಾನೂನು ಚೌಕಟ್ಟನ್ನು ಸಿದ್ಧಪಡಿಸುವ ಉನ್ನತ ಮಟ್ಟದ ಸಮಿತಿಯ ಭಾಗವಾಗಿದ್ದರು. 100 ಕ್ಕೂ ಹೆಚ್ಚು ಪುಸ್ತಕಗಳ ಲೇಖಕರಾದ ಅವರು 1983 ರಿಂದ 1990 ರವರೆಗೆ ಲೋಕಸಭೆಯ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಜವಾಹರಲಾಲ್ ನೆಹರು ಅವರ ಮೊದಲ ಲೋಕಸಭೆಯ ಕಾಲದಿಂದ 9 ನೇ ಲೋಕಸಭೆಯವರೆಗೆ 37 ವರ್ಷಗಳಿಗೂ ಹೆಚ್ಚು ಕಾಲ ಸಂಸತ್ತಿನಲ್ಲಿ ಸೇವೆ ಸಲ್ಲಿಸಿದರು.ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದರು, ಮೊದಲು ಬಿಜ್ನೋರ್ ಮತ್ತು ನಂತರ ಮೀರತ್‌ನಲ್ಲಿ ಸ್ಥಳೀಯ ವಿದ್ಯಾರ್ಥಿ ಚಳುವಳಿಗಳನ್ನು ಮುನ್ನಡೆಸಿದರು.ಅಲಹಾಬಾದ್, ನವದೆಹಲಿ, ವಾಷಿಂಗ್ಟನ್ ಡಿಸಿ, ಲಂಡನ್ ಮತ್ತು ಜಿನೀವಾದಲ್ಲಿ ಉನ್ನತ ಶಿಕ್ಷಣ ಮತ್ತು ವೃತ್ತಿಪರ ತರಬೇತಿಯನ್ನು ಪಡೆದರು. ಕಶ್ಯಪ್ ಪತ್ರಕರ್ತರಾಗಿ ಮತ್ತು ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ತಮ್ಮ ವೃತ್ತಿಪರ ವೃತ್ತಿಜೀವನವನ್ನು ಪ್ರಾರಂಭಿಸಿದರು ಮತ್ತು ಸಂಸತ್ತನ್ನು ಸೇರುವ ಮೊದಲು ಅಲಹಾಬಾದ್ ಹೈಕೋರ್ಟ್‌ನಲ್ಲಿ ವಕೀಲರ ತರಬೇತಿಯನ್ನು ಪಡೆದರು. ಅನೇಕ ಗೌರವಗಳಿಗೆ ಪಾತ್ರರಾದ ಅವರಿಗೆ ಪದ್ಮಭೂಷಣ ಪ್ರಶಸ್ತಿ ನೀಡಲಾಯಿತು.

# ಪರಿಸರದ ಬಗ್ಗೆ ಕಾಳಜಿ ಹೆಚ್ಚಾಗಲಿ: ಚಿದಾನಂದ ಓಲೇಕಾರ್

ಅ.ಶ. ಸುದ್ದಿ ಕುಕನೂರು

**ಕುಕನೂರ: ಮಾನವನ ಸೃಷ್ಟಿಗೆ ಪರಿಸರ ಪೂರಕವಾಗಿದೆ, ಭೂಮಿಯಲ್ಲಿ ಮಾತ್ರ ಮನುಷ್ಯ ಸಂಕುಲ ಇದ್ದು, ನಮ್ಮಉಸಿರಾಟಕ್ಕೆ ಆಮ್ಲ ಜನಕ ಅತ್ಯವಶ್ಯಕವಾಗಿದೆ. ಆ ಆಮ್ಲಜನಕ ಮರಗಳಿಂದ ಹೊರಬರುತ್ತದೆ, ಅದನ್ನು ನಾಶ ಮಾಡದೇ ಅದರ ರಕ್ಷಣೆ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಪರಿಸರದ ಕಾಳಜಿ ಹೆಚ್ಚಾಗಲಿ ಎಂದು ಯಲಬುರ್ಗಾ ಅರಣ್ಯ ಇಲಾಖೆಯ ಡಿವೈಆರ್ ಎಫ್ ಒ ಚಿದಾನಂದ ಓಲೇಕಾರ್ ಅವರು ಅಭಿಪ್ರಾಯಪಟ್ಟರು.**

ಕುಕನೂರ ತಾಲೂಕಿನ ಮಂಗಳೂರ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ನಡೆದ "ವಿಶ್ವ ಪರಿಸರ ದಿನಾಚರಣೆಯ ಉದ್ಘಾಟಣಾ ಕಾರ್ಯಕ್ರಮ ನೆರವೇರಿಸಿ ಮಾತನಾಡಿದರು. ನಮ್ಮ ಇಲಾಖೆ ಅರಣ್ಯ ರಕ್ಷಣೆಯ ಹಾಗೂ ವಿಸ್ತರಣೆಯಲ್ಲಿ ನಿರಂತರವಾಗಿದೆ. ಕ್ಷೇತ್ರದಲ್ಲಿ ಅರಣ್ಯ ಪ್ರದೇಶ ವಿಸ್ತರಣೆಯಾಗಬೇಕು.ಅದಕ್ಕೆ ನಮ್ಮ ಇಲಾಖೆಯ ಸಾಹಕಾರ ನೀಡುತ್ತದೆ.ಯಾರಿಗಾದರೂ ಸಸಿಗಳ ಅವಶ್ಯಕತೆ ಇದ್ದರೆ ಇಲಾಖೆಯಿಂದ ಪಡೆಯಬಹುದು ಎಂದು ಹೇಳಿದರು. ಕೆಪಿಎಸ್ ಶಾಲೆಯಲ್ಲಿ ಹಮ್ಮಿಕೊಂಡಿರುವ ವನಮಹೋತ್ಸವ ಕಾರ್ಯಕ್ರಮ ಇತರರಿಗೆ ಮಾದ–ರಿಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಒಂಬತ್ತು ಗ್ರಹಗಳಲ್ಲಿ ಭೂಮಿಗೆ ವಿಶೇಷವಿದೆ. ಈ ಗ್ರಹದಲ್ಲಿ ಮಾತ್ರ ಮನುಷ್ಯ ಜೀವಿಸುತ್ತಿದ್ದಾನೆ. ಜಾಗತಿಕ ತಾಪಮಾನ



ಹೆಚ್ಚಾಗುತ್ತಿದ್ದು, ಅರಣ್ಯ ಪ್ರದೇಶ ಕಡಿಮೆ ಆಗುತ್ತಿದೆ. ಆಮ್ಲಜನಕ ಸ್ವಲ್ಪ ಕಡಿಮೆ ಆದರೂ ಮನುಷ್ಯ ಜೀವಿಸುವುದು ಕಷ್ಟವಾಗುತ್ತದೆ. ಆದ್ದ–ರಿಂದ ಮರಗಳ ಮಹತ್ವ ಅರಿತು ಅದರ ವೃದ್ಧಿಗೆ ಶ್ರಮಿಸಬೇಕು ಎಂದು ಹಿರಿಯ ಉಪನ್ಯಾಸಕ ವಿರೇಶಪ್ಪ ಎನ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಜಾಗತಿಕರಣ, ನಗರಿಕರಣ, ಉದ್ಯೋಗಿಕರಣದ ಹೆಸರಲ್ಲಿ ಅರಣ್ಯ ನಾಶವಾಗುತ್ತಿದೆ. ಸದ್ಯ ಭಾರತದಲ್ಲಿ 7,15,343 ಚದರ ಕಿ.ಮೀ ಅರಣ್ಯ ಪ್ರದೇಶವಿದೆ, ಹಾಗೇ ಕರ್ನಾಟಕದಲ್ಲಿ 41383 ಚದರ ಕಿ.ಮೀ ಅರಣ್ಯವಿದ್ದು ದಿನೇ ದಿನೇ ಕ್ಷೀಣಿಸುತ್ತಿದೆ.

ಸುಂದರ ಬಹುಗುಣ, ಮೇದಾ ಪಾಟ್ಕರ್, ಸಾಲುಮರದ ತಿಮ್ಮಕ್ಕ ಅಂತವರ ಅವಶ್ಯಕತೆ ಇದ್ದು, ಮುಂದಿನ ದಿನಗಳಲ್ಲಿ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನಿರಂತರವಾಗಿ ನಡೆಯುತ್ತದೆ ಎಂದು ಕೆಪಿಎಸ್ ನ ಎಸ್ ಡಿ ಎಂ ಸಿ ಉಪಾಧ್ಯಕ್ಷ ಉಪಾಧ್ಯಕ್ಷ ಅನಿಲ್ ಕುಮಾರ್ ಎಂ ಕಲ್ಭಾವಿ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. 1973 ಜೂನ್ ,05 ರಂದು ಮೊದಲ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು, ಅಲ್ಲಿಂದ ನಿರಂತರವಾಗಿ, ಪರಿಸರದ ಬಗ್ಗೆ ಕಾಳಜಿ ವಹಿಸುವ ಕಾರ್ಯಕ್ರಮಗಳು ನಡೆಯುತ್ತಿದ್ದು, ಸಸಿಗಳ ನಡೆವ ಕಾಯಕ್ರಮ ಹೆಚ್ಚಾಗಬೇಕು ಎಂದು ಬಾಲಕಿಂ–ಠರ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಸುರೇಶ ಮಾದಿನೂರ ಹೇಳಿದರು.

ಕಾರ್ಯಕ್ರಮದ ಪ್ರಾರ್ಥ–ನಾ ಗೀತೆಯನ್ನು ಉಪಪ್ರಾಂಶುಪಾಲ ಹನಮಂತಪ್ಪ ಆವಾರದಮನಿಯವರು ನೆರವೇ–ರಿಸಿದರು. ನಿರೂಪಣೆಯನ್ನು ಹಿರಿಯ ಶಿಕ್ಷಕ ಕೋಟ್ರೇಶ್ ಹೆಸರೂರ್ ಮಾಡಿದರು. ಈ ಸಂದರ್ಭದಲ್ಲಿ ಕೆಪಿಎಸ್ ನ ಪ್ರಾಂಶುಪಾಲ ಗೋಪಾಲಯ್ಯ ಟಿ, ಉಪಪ್ರಾಂಶುಪಾಲ ಹನಮಂತಪ್ಪ ಆವಾರದಮನಿ, ಮುಖ್ಯೋಪಾಧ್ಯಾಯರಾದ ಶಕುಂತಲಾ ಪಾಟೀಲ್, ಬೀಟ್ ಫಾರೆಸ್ಟರ್ ಕಳಕಪ್ಪ ಬ್ಯಾಳಿ, ಗ್ರಾ. ಪಂ. ಗ್ರೇಡ್ 01 ಕಾರ್ಯದರ್ಶಿ ಜಂಬಯ್ಯ, ಕೆಪಿಎಸ್ ಎಸ್ ಡಿ ಎಂಸಿಯ ನಾಮ ನಿರ್ದೇಶನ ಸದಸ್ಯರಾದ ಚಂದ್ರಕಾಂತ ಅಷ್ಟಗಿ, ಮೈಲಾರಪ್ಪ ಕಂದಗಲ್, ಸದಸ್ಯರಾದ ಶ್ರೀದೇವಿ ಸೋಮಲಾಪುರ್, ಅಂಬ್ರಮ್ಮ ವಿರೇಶ್ ಚಿನ್ನೂರ್, ಬಾ.ಪ್ರೌ.ಶಾಲೆಯ ಎಸ್ ಡಿ ಎಂ ಸಿ ಉಪಾಧ್ಯಕ್ಷೆ ಸುಜಾತ ಉಮಚಗಿ, ಸದಸ್ಯೆ ಮಮತಾಜ್ ಬೇಗಂ, ಶಿಕ್ಷಕರಾದ ಕಳಕಯ್ಯ ಹಿರೇಮಠ, ಮಾರುತಿ ಬನಿಗೋಳ್, ಆನಂದ ಚಿನ್ನೂರ್, ಬಾಬುಸಾಬ ಗುಡಿಹಿಂದಲ್, ಮಹಾವೀರ ಕಲ್ಭಾವಿ, ಶಿಕ್ಷಕಿಂ–ಠರಾದ ಲಕ್ಷ್ಮೀದೇವಿ, ಜಯಶ್ರೀ ಬಂಡಿಹಾಳ, ವಿಎಸ್ ಎಸ್ ಎನ್, ಸದಸ್ಯ ಈರಣ್ಣ ಉಮಚಗಿ, ಗುರುಲಿಂಗಪ್ಪ ಗೊಂಡಬಾಳ, ಸಿಬ್ಬಂದಿಗಳಾದ ಮಹೇಶ್, ಬಸವರಾಜ ಪಟ್ಟಣಶೆಟ್ಟಿ, ಮುದ್ದು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ : ಕೃಷ್ಣ ವಿದ್ಯಾಪತಿ



ಅ.ಶ. ಸುದ್ದಿ ಕುಕನೂರು

**ಕುಕನೂರು: ಪರಿಸರ ಸಂರಕ್ಷಣೆಯಿಂದ ಮನು ಕುಲ ಉಳಿವಿಗೆ ಸಹಕಾರಿಯಾಗಲಿದ್ದು ಪ್ರತಿಯೊಬ್ಬರು ಪರಿಸರ ರಕ್ಷಿಸಲು ಮುಂದಾಗಬೇಕು ಎಂದು ವಿದ್ಯಾಶ್ರೀ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಕ ಕೃಷ್ಣ ವಿದ್ಯಾಪತಿ ಹೇಳಿದರು.**

ಅವರು ಪಟ್ಟಣದ ವಿದ್ಯಾಶ್ರೀ ಆಂಗ್ಲ ಮಾಧ್ಯಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಪರಿಸರ ರಕ್ಷಣೆ ಕು–ರಿತು ಕಾರ್ಯಕ್ರಮ ಮತ್ತು ಶಾಲಾ ಆವರಣದಲ್ಲಿ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ ನಾವು ಇಂದು ಪರಿಸರವನ್ನು ಸಂರಕ್ಷಿಸಿದರೆ ಮಾತ್ರ ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೀರು ಮತ್ತು ಹಸಿರು ತುಂಬಿದ ಭೂಮಿಯನ್ನು ನೀಡಲು ಸಾಧ್ಯ.

ನಮ್ಮ ಸುತ್ತ ಮುತ್ತಲಿನ ಪರಿಸರ ಉಳಿಯಲು ಪ್ರತಿಯೊಬ್ಬರು ಪಣ ತೊಡುವ ಮೂಲಕ ಮಾನವನಿಗೆ, ಪಶು, ಪ್ರಾಣಿ ಸಂಕುಲಕ್ಕೆ ಮಾರಕವಾಗುವ ಪ್ಲಾಸ್ಟಿಕ್ ಬಳಕೆ ನಿಷೇದಿಸಿ, ಮರುಬಳಕೆ ವಸ್ತುಗಳನ್ನು ಬಳಕೆ ಮಾಡಬೇಕು ಎಂದು ಕರೆ ನೀಡಿದರು. ಮಾಲಿನ್ಯ, ಹವಾಮಾನ ಬದಲಾವಣೆ ಮತ್ತು ಜೀವವೈವಿಧ್ಯತೆಯ ನಾಶದಂತಹ ಗಂಭೀರ ಸಮಸ್ಯೆಗಳ ಬಗ್ಗೆ ಪರಿಸರ ಸಂರಕ್ಷಿಸುವ ಮೂಲಕ ಸಮಾಜಕ್ಕೆ ಅರಿವು ಮೂಡಿಸುವುದು ಅತ್ತಗತ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಅನ್ವರ್ ಪಾಷಾ, ಪ್ರಭು ಬುಕೆಟಗಾರ, ಮಂಜುನಾಥ ಗದಗ, ಶಿವಶಂಕರ್ ಹಿರೇಮಠ, ಪವನ್, ಮಾರುತಿ, ದರ್ಶನ, ಆನಂದ ಜೋಷಿ, ಶಶಿಕಾಂತ ಪತ್ತಾರ, ಶಿಕ್ಷಕಿಂ–ಠರಾದ ಮಂಜುಳಾ ಮಂಡಲಗಿರಿ, ಜಯಶ್ರೀ ಅಂಗಡಿ, ನಜ್ಮಾ ಮಕಾನದಾರ, ಶ್ವೇತಾ ಹಿರೇಮಠ ಸೇರಿದಂತೆ ಶಾಲಾ ಸಿಬ್ಬಂದಿಯರು, ವಿದ್ಯಾರ್ಥಿಗಳು ಹಾಜರಿದ್ದರು.

# ಸಸಿ ನೆಡುವ ಮೂಲಕ ಜನುಮ ದಿನಾಚರೆ ಆಚರಿಸಬೇಕು :ವೀರಯ್ಯ



ಅ.ಶ. ಸುದ್ದಿ ಕುಕನೂರು

**ಕುಕನೂರು: ಪ್ರತಿಯೊಬ್ಬ ವ್ಯಕ್ತಿಗಳು ತಮ್ಮ ಹುಟ್ಟುಹಬ್ಬದಂದು ಒಂದು ಸಸಿ ನೆಡುವ ಪಣ ತೊಡಬೇಕು ಇದರಿಂದ ಪರಿಸರ ಸಂರಕ್ಷಿಸಲು ಸಹಕಾರಿಯಾಗುತ್ತದೆ ಎಂದು ರಾಜೂರು ಸರಕಾರಿ ಪ್ರೌಢಶಾಲೆಯ ಶಿಕ್ಷಕ ವೀರಯ್ಯ ಸಸಿಮಠ ಹೇಳಿದರು.**

ಅವರು ರಾಜೂರು ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ಅರಣ್ಯ ಇಲಾಖೆಯವರು ಹಮ್ಮಿಕೊಂಡ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ ಇಂದಿನ ದಿನಮಾನಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಗಳು ತಮ್ಮ ಹುಟ್ಟು ಹಬ್ಬ ಆಚರಣೆಗಾಗಿ ಸಾಕಷ್ಟು ದುಂದು ವೆಚ್ಚ ಮಾಡುವ ಬದಲು ಒಂದು ಸಸಿ ನೆಡುವ ಮೂಲಕ ಪರಿಸರ ಉಳುವಿಗೆ ಪಣ ತೊಟ್ಟಾಗ ಮುಂದಿನ ಪೀಳಿಗೆಗೆ ಹಾಗೂ ಪ್ರಾಣಿ, ಪಕ್ಷಿ ಸಂಕುಲ ಬದುಕಲು ಸಹಕಾ–ರಿಯಾಗುತ್ತದೆ ಎಂದು ಕಿವಿ ಮಾತನ್ನು ಹೇಳಿದರು.

ನಂತರ ತಾಲೂಕ ಅರಣ್ಯಾಧಿಕಾರಿಗಳಾದ ಕವಿತಾ ನಾಯಕ ಮಾತನಾಡಿ ವಿದ್ಯಾರ್ಥಿಗಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಹಸಿರೀಕರಣವನ್ನು ಪ್ರೋತ್ಸಾಹಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾದೆ ಎಂದರು. ಪ್ರಕೃತಿಯನ್ನು ರಕ್ಷಿಸುವುದು ಎಂದರೆ ನಮ್ಮ ಅಸ್ತಿತ್ವವನ್ನು ನಾವು ಉಳಿಸಿಕೊಂಡಂತೆ. ಮುಂದಿನ ಪೀಳಿಗೆಗೆ ಶುದ್ಧವಾದ ಗಾಳಿ, ನೀರು ಮತ್ತು ಹಸಿರು ತುಂಬಿದ ಭೂಮಿಯನ್ನು ಒದಗಿಸುವುದರಿಂದ ಮಾನವ ಸಂಕುಲ ಆರೋಗ್ಯವಾಗಿ ಬದುಕಲು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಯವರಾದ ಜಗದೀಶ ಮರಡಿ, ಮಾರುತಿ, ಶರಣಪ್ಪ, ನಜೀರ್, ಸಿದ್ದಪ್ಪ ಹಾಗೂ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸಿದ್ದನಗೌಡ, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷರಾದ ಶಿವಪುತ್ರಪ್ಪ ಮಡ್ಡಿ, ಸದಸ್ಯರಾದ ಶಿವಲಿಂಗಪ್ಪ, ಅಂದಪ್ಪ ಹಳ್ಳಿಗುಡಿ, ಹನುಮಂತಗೌಡ ಪಾಟೀಲ್, ದೇವಪ್ಪ ನಾಯಕ, ಮುಖ್ಯ ಶಿಕ್ಷಕ ವೀರಣ್ಣ ಮೆಣಸಿನಕಾಯಿ, ಶಿಕ್ಷಕರಾದ ಪ್ರಭು ಶಿವನಗೌಡ್ರ, ಚಂದ್ರಶೇಖರ ಪಲ್ಲೇದ, ಆಯುಶಾ ಬೇಗಂ, ಲಲಿತಾ ಮಂಗಳೂರು, ಗೀತಾ ತೋಟಿ, ಮಲ್ಲಮ್ಮ ನಾಯಕ ಸೇರಿದಂತೆ ಶಾಲೆಯ ಸಿಬ್ಬಂದಿಯವರು, ವಿದ್ಯಾರ್ಥಿಗಳು ಇನ್ನಿತರರು ಇದ್ದರು.

# ಪರಿಸರ ಅಭಿಯಾನ ; ಪೋಸ್ಟರ್ ಬಿಡುಗಡೆ

ಅ.ಶ. ಸುದ್ದಿ ಕೊಪ್ಪಳ

**ಕೊಪ್ಪಳ: ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕೊಪ್ಪಳ ಘಟಕದ ವತಿಯಿಂದ ಜೂನ್ 5ರಿಂದ 15ರವರೆಗೆ ರಾಜ್ಯಾದ್ಯಂತ ಹಮ್ಮಿಕೊಳ್ಳಲಾಗಿರುವ "ಪರಿಸರ ಅಭಿಯಾನ?2026" ಅಂಗವಾಗಿ "ಪಾಲಕತ್ವ ಜವಾಬ್ದಾರಿಯ ಮರುಸ್ಥಾಪನೆ" ಎಂಬ ಸಂದೇಶವುಳ್ಳ ಪೋಸ್ಟರ್ ಅನ್ನು ಕೊಪ್ಪಳದ ಅರಣ್ಯಾಧಿಕಾರಿ ಮುಲ್ಲಾ ಸಾಹೇಬ್ ಅವರು ಬಿಡುಗಡೆಗೊಳಿಸಿದರು.**

ಪೋಸ್ಟರ್ ಬಿಡುಗಡೆ ಬಳಿಕ ಪರಿಸರ ಸಂರಕ್ಷಣೆ ಹಾಗೂ ಹಸಿರು ವಾತಾವರಣ ನಿರ್ಮಾಣದ ಉದ್ದೇಶದಿಂದ ಗಿಡ ನೆಡುವ ಕಾರ್ಯಕ್ರಮಕ್ಕೆ



ಅಗತ್ಯವಿರುವ ಸಸಿಗಳನ್ನು ಒದಗಿಸುವಂತೆ ಸಾಲಿಡಾ–ರಿಟಿ ಯೂತ್ ಮೂವ್‌ಮೆಂಟ್ ವತಿಯಿಂದ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಯಿತು. ಮನವಿಗೆ ಸ್ಪಂದಿಸಿದ ಅರಣ್ಯಾಧಿಕಾರಿ ಮುಲ್ಲಾ ಸಾಹೇಬ್ ಅವರು 100 ಗಿಡಗಳನ್ನು ನೀಡಲು ಅನುಮೋದನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಂಘಟನೆಯ ಪದಾಧಿಕಾರಿಗಳು, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ಅಭಿಯಾನದ ಅಂಗವಾಗಿ ಗಿಡ ನೆಡುವುದು, ಪರಿಸರ ಜಾಗೃತಿ ಮೂಡಿಸುವುದು ಹಾಗೂ ಜನರಲ್ಲಿ ಪ್ರಕೃತಿ ಸಂರಕ್ಷಣೆಯ ಕುರಿತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಕೊಪ್ಪಳ ಘಟಕದ ಅಧ್ಯಕ್ಷ ಏಜಾಜ್ ಶರೀಫ್, ಕಾರ್ಯಕರ್ತರಾದ ಮೊಹಮ್ಮದ್ ಯೂಸುಫ್, ಅಸದುಲ್ಲಾ ಸೇ–ರಿದಂತೆ ಇತರರು ಉಪಸ್ಥಿತರಿದ್ದರು.

# ಪರಿಸರ ಬೆಳೆಸಿ ನಾಡು ಉಳಿಸಿ: ನಾಗರಾಜ



ಅ.ಶ. ಸುದ್ದಿ ಯಲಬುರ್ಗಾ

**ಯಲಬುರ್ಗಾ: ಈ ತಿಂಗಳು ಮುಂಗಾರು ಹಂಗಾಮು ಇರುವದರಿಂದ ಗಿಡಗಳನ್ನು ನೆಡಲು ಸೂಕ್ತ ಸಮಯಾವಗಿದೆ ಈ ತಿಂಗಳ ಅಂತ್ಯದವರೆಗೂ ಪ್ರತಿಯೊಬ್ಬರಿಂದ ಅಥವಾ ಪ್ರತಿ ವಿದ್ಯಾರ್ಥಿ ತಂಡದಿಂದ ಭವಿಷ್ಯದಲ್ಲಿ ಉಪಯುಕ್ತವಾಗುವಂತಹ ನೆರಳು ಹಾಗೂ ಫಲ ನೀಡುವ ಗಿಡಗಳನ್ನು ನೆಟ್ಟು ಪೋಷಣೆ ಮಾಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಯುವ ಮುಖಂಡ ನಾಗರಾಜ ಮಾದರ ಹೇಳಿದರು.**

ತಾಲೂಕಿನ ಕುದರಿಕೋಟಗಿ ಎರಡನೇ ಅಂಗನವಾಡಿ ಕೇಂದ್ರದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ನಿಮಿತ್ಯ ಸಸಿ ನೆಡುವ ಮೂಲಕ ಆಚ–ರಣೆ ಮಾಡಿ ಅವರು ಮಾತನಾಡಿದರು. ಶಾಲಾ ಆವರಣದಲ್ಲಿ ನಾನಾ ರೀತಿಯ ಅಲಂಕಾರಿಕ ಗಿಡಗಳು, ಹೂವಿನ ಗಿಡಗಳು ಹಾಗೂ ಔಷಧ ಗಿಡಗಳನ್ನು ಬೆಳೆಸಿ ಶಾಲೆಯ ಸೊಬಗನ್ನು ಹೆಚ್ಚಿಸುವುದರ ಜತೆಗೆ, ಶಾಲಾ ಮೈದಾನದ ಅನುಪಯುಕ್ತ ಜಾಗದಲ್ಲಿ ಸ್ಥಳೀಯ ವಾತಾವರಣಕ್ಕೆ ಅನುಗುಣವಾದ ತೆಂಗು, ಮಾವು, ಹಲಸು, ನೇರಳೆ, ಸೀಬೆ, ದಾಳಿಂಬೆ, ನೆಲ್ಲಿ, ಬೇವು, ಅರಳಿ, ಹೊಂಗೆ, ಸಂಪಿಗೆ, ಟೀಕ್, ಅಶೋಕ ಹಾಗೂ ಸರ್ವೆ ಸೇ–ರಿದಂತೆ ಇತರೆ ಸಸ್ಯಗಳನ್ನು ಅರಣ್ಯ ಹಾಗೂ ತೋಟಗಾರಿಕೆ ಇಲಾಖೆಗಳಿಂದ ಪಡೆಯುವುದರ ಮೂಲಕ ಶಾಲಾ ಪರಿಸರವನ್ನು ಹಸಿ–ರೀಕರಣವಿರುವಂತೆ ನೋಡಿಕೊಳ್ಳಬೇಕು ಆದರೆ ಇಗ ಇಲ್ಲಿ ಜಾಗದ ಲಭ್ಯ ಕಡಿಮೆ ಇರು ದರಿಂದ ಹೊಸ ಕಟ್ಟಡವಾದ ನಂತರ ಎಲ್ಲಾ ರೀತಿಯ ಗಿಡಗಳನ್ನು ನೆಡಲಾಗುವದು ಎಂದರು. ಅಂಗನವಾಡಿ ಕಾರ್ಯಕರ್ತೆ ಸುಜಾತ ಛಲವಾದಿ ಮಾತನಾಡಿ ಶಾಲಾ ಹಂತದಲ್ಲಿ ಮಕ್ಕಳಿಗೆ ಪರಿಸರ ಹಾಗೂ ಅದರ ಮಹತ್ವ ಕು–ರಿತು ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಅಂ–ದಾಗ ಪ್ರತಿ ಮಕ್ಕಳಲ್ಲಿ ಪರಿಸರ ಬಗ್ಗೆ ಕಾಳಜಿ ಮೂಡಿಸಲು ಸಹಕಾರಿಯಾಗುತ್ತದೆ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಬಸವರಾಜ ಮಾದರ, ಸಹಾಯಕಿ ಕವಿತಾ ಮಾದರ ಸೇರಿದಂತೆ ಅನೇಕ ಮುಖಂಡರು ಪಾಲಕರು ಮಕ್ಕಳು ಹಾಜರಿದ್ದರು.

# ಲೇಖಕರ ದಿನಚರಿ...

## ಬಾಬಾಸಾಹೇಬ ಅಂಬೇಡ್ಕರರ ನಿಜವಾದ ಅನುಯಾಯಿಗಳು ಯಾರು?

??

ಡಿ.ಶಬ್ರಿನಾ ಮಹಮದ್ ಅಲಿ,ಚಳ್ಳಕೆರೆ

ಇತ್ತೀಚಿನ ದಿನಗಳಲ್ಲಿ ಆಳ ಅರ್ಥವಿರುವ 'ಅನುಯಾಯಿ' ಅನ್ನುವ ಪದ ಬಹಳ ಸಂಕುಚಿತವಾದ ಅರ್ಥವನ್ನು ಪಡೆಯುತ್ತಿದೆ. ಇದಕೆ ಕಾರಣ ಅತಿಯಾದ ತಂತ್ರಜ್ಞಾನ ಬಳಕೆಯಿಂದ ಮಾನವನ ಮೆದುಳು ತುಕ್ಕು ಹಿಡಿಯತ್ತಿರುವುದೇ ಆಗಿದೆ! ಬಯಸಿದ್ದೆಲ್ಲವೂ ಕ್ಷಣಾರ್ಧದಲ್ಲಿ ನಮ್ಮ ಕೈ ಸೇರುವ ಈ ಅನಾಯಸದ ವ್ಯವಸ್ಥೆಗೆ ಮುಗುಳ್ನಗುತ್ತಾ ನಮ್ಮ ಸೃಜನಶೀಲ ಚಿಂತನೆಗಳಿಗೆ ಪೂರ್ಣವಿರಾಮವಿನಿಟ್ಟು ಆಲಸ್ಯವನ್ನ ನಮ್ಮ ಮೈಮನವೆಲ್ಲಾ ತುಂಬಿಕೊಂಡು ಅಜ್ಞಾನಕ್ಕೆ ಹತ್ತಿರವಾಗುತ್ತಿದ್ದೇವೆ! ಕ್ಷಣಕಾಲ ಕಣ್ಮುಚ್ಚಿ ಶಾಂತವಾಗಿ ಯೋಚಿಸಿ ನೋಡಿ,

ಬುದ್ದನ ಅನುಯಾಯಿಯೆಂದರೆ ನಮ್ಮೊಳಗೆ 'ಪ್ರೇಮ', ಪ್ರವಾದಿಯವರ ಅನುಯಾಯಿಯೆಂದರೆ ನಾವಿಡುವ ಪ್ರತಿ ಹೆಜ್ಜೆಯಲೂ 'ಮಾನವೀಯತೆ', ಬಸವಣ್ಣನವರ ಅನುಯಾಯಿಯೆಂದರೆ ಮೈಮನವೆಲ್ಲಾ 'ಸಮಾನತೆ' ತುಂಬಿ ತುಳುಕಾಡಬೇಕು. ಅದೇ ರೀತಿ ನಾವು ಅಂಬೇಡ್ಕರ್ ಅವರ ಅನುಯಾಯಿಗಳು ಎಂದು ಹೇಳಬೇಕಾದರೆ ನಮ್ಮೊಳಗೆ ಅಪಾರ ಜ್ಞಾನ,ತಿಳುವಳಿಕೆ ವೈಚಾ-ರಿಕತೆ, ವೈಜ್ಞಾನಿಕತೆ,ಭಾವೈಕ್ಯತೆಗಳೆಲ್ಲವೂ ತುಂಬಿ ತುಳಕಬೇಕು. ಆ ಎಲ್ಲಾ ಗುಣಗಳು ನಮ್ಮೊಳಗೆ ಬರಬೇಕಾದರೆ,ಬಾಬಾ ಸಾಹೇಬರು ನಡೆದ ಶಿಕ್ಷಣದ ಹಾದಿಯಲ್ಲಿ ನಾವು ಸಾಗಬೇಕು! ರವಿ ಮಾಹೆ.ಜಿ ಅವರು ಅಂಬೇಡ್ಕರ್ ವಾದವನ್ನು 'ಹೊಸ ಜನ್ಮ' ಎಂದು ವ್ಯಾಖ್ಯಾನಿಸುತ್ತಾರೆ.

ಮಾನಸಿಕ ಬಂಧನಗಳು ಮತ್ತು ಜಾತಿಯ ಗುಲಾಮಗಿರಿಯಿಂದ ಮುಕ್ತರಾದವರು ಅಂಬೇಡ್ಕರ್ ವಾದಿಗಳು ಎಂದು ನಾನು ಭಾವಿಸುತ್ತೇನೆ. ಜಾತಿ, ಧರ್ಮ, ಭಾಷೆ ಅಥ-'ವಾ ಪ್ರದೇಶವನ್ನು ಲೆಕ್ಕಿಸದೆ ಜಾತಿ ವಿರೋಧಿ ಚಳುವಳಿಯ ಬಗ್ಗೆ ಜಾಗೃತಿ ಮೂಡಿಸುತ್ತಾ ಜ್ಞಾನ ಮಾರ್ಗದಲ್ಲಿ ನಡೆಯುವವರು ಅಂಬೇಡ್ಕರ್ ವಾದಿಗಳು" ಎಂದು ಹೇಳುತ್ತಾರೆ.

**ಇತಿಹಾಸವನ್ನ ಕೊಂಚ ಮೆಲುಕು ಹಾಕೋಣಾ**

ಭಾರತದ ಸಂವಿಧಾನ ಶಿಲ್ಪಿಗಳಾದ ಡಾ। ಬಿ.ಆರ್ ಅಂಬೇಡ್ಕರ್ ಅವರು ತುಳಿತಕ್ಕೆ ಒಳಗಾಗಿದ್ದವರ ದನಿಯಾಗಿ ಅಂತಹ ಜನರ ಹಿತ ಕಾಪಾಡಲು ಹೋರಾಟ ನಡೆಸಿದ ಮಹಾನ್ ಚೇತನವಾಗಿದ್ದಾರೆ. ಅಷ್ಟೇಯಲ್ಲ, ಈ ದೇಶದ ಸಮಗ್ರ ಅಭಿವೃದ್ಧಿಯ ಕನಸನ್ನು ಕಂಡ ಅವರಿಗೆ ಸ್ವಾತಂತ್ರ್ಯೋತ್ತರ ಭಾರತದ ನಿರ್ಮಾತೃಗಳ ಸಾಲಿನಲ್ಲಿ ಅತೀ ಮುಖ್ಯವಾದ ಸ್ಥಾನವಿದೆ ಎಂದರೆ ಅತಿಶಯೋಕ್ತಿ ಆಗಲಾರದು.

ಏಕೆಂದರೆ, ಅವರ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಸಮಾನತೆಯ ಪ್ರತಿಪಾದಕರಾಗಿ ಕಾನೂನು ತಜ್ಞರಾಗಿ,ದಾರ್ಶನಿಕರಾಗಿ ದೇಶ ವಿದೇಶಗಳಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಪಡೆದ ಅವರು ಎಲ್ಲಾ ದುರ್ಬಲ ವರ್ಗಗಳಿಗೂ ಪ್ರೇರಣೆಯನ್ನು ನೀಡುವ ಬೆಳಕಾಗಿ ನಿಂತಿದ್ದಾರೆ. ದೇಶದಲ್ಲಿ ಸಮಗ್ರತೆ ಸಮಾನತೆ ಅಂತಹ ಆದರ್ಶಗಳನ್ನು ಕಾಪಿಟ್ಟುಕೊಳ್ಳುವಲ್ಲಿ ಬಾಬಾಸಾಹೇಬ ಅಂಬೇಡ್ಕರ್ ಅವರ ಬದುಕೇ ನಮಗೊಂದು ಕೈಗನ್ನಡಿಯಂತಿದೆ. ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿ ಪದ್ಧತಿಯ ವಿರುದ್ಧ ಹೋರಾಡುವ ಮೂಲಕ ಇಂದಿನ ನಮ್ಮ ಹಸನಾದ ಬದುಕಿಗೆ ಭದ್ರ ಬುನಾದಿ ಹಾಕಿಕೊಟ್ಟರು, ಶಿಕ್ಷಣ ಎಂಬ ಮಹಾಕ್ರಾಂತಿಯ ಮಾಡಿ ನಮಗೆಲ್ಲಾ ಬೆಳಕ ತೋರುವ ದೀವಿಗೆಯಾಗಿ ಇತಿಹಾಸವನ್ನೇ ಸೃಷ್ಟಿಸಿದರು.

ಸಾಮಾಜಿಕ ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನು ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ಮೊದಲ ಅಸಪೃಶ್ಯ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಶಿಕ್ಷಣ ಉಳ್ಳವರ ಮೆಲ್ವರ್ಗದವರ ಸ್ವತ್ತಲ್ಲ ಎಂಬುದನ್ನ ಇಡೀ ಜಗತ್ತಿಗೆ ಸಾರಿದರು. ನ್ಯಾಯಶಾಸ್ತ್ರ ಅರ್ಥಶಾಸ್ತ್ರ ರಾಜ್ಯಶಾಸ್ತ್ರ ಸಂಬಂಧವಾದ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂತ ವಿಶ್ವವಿದ್ಯಾಲಯದಿಂದ ಲಂಡನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟರೇಟ್ ಪದವಿಗಳನ್ನು ಪಡೆದ ಮಹನೀಯರಲ್ಲಿ ಒಬ್ಬರಾಗುವ ಮೂಲಕ ಶ್ರದ್ಧೆಯಿಂದ ಓದಿದರೆ ಉನ್ನತ ಸ್ಥಾನಮಾನಗಳು ಜಾತಿ,ಧರ್ಮ ಮೇಲು ಕೀಳು ನೋಡದೆ ನಮ್ಮಮುಡಿಗೇರುತ್ತವೆ ಎಂಬುದನ್ನ ಸಾಧಿಸಿ ತೋರಿಸಿದರು.

ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದವರು ಸಮಾಜದ ಕೆಲ ವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ರಾಜ-ಕೀಯ ಹಕ್ಕುಗಳಿಗಾಗಿ ಅಹರ್ನಿಶಿ ಹೋರಾಟ ಮಾಡಿದರು. ಇಂತಹ



ಮಹಾಚೇತನದ ಅನುಯಾಯಿಗಳು ನಾವಾಗಬೇಕಾದರೆ ನಾವು ಅವರಂತೆ ಜ್ಞಾನ ಮಾರ್ಗದಲಿ ಸಾಗಬೇಕಲ್ಲವೇ? ಅನಾದಿ ಕಾಲದಿಂದ ಬಂದ ಅರ್ಥಹೀನ ಶೋಷಣೆಯಿಂದ ನಾವು ಆಚೆ ಬರಬೇಕಾದರೆ ಶಿಕ್ಷಣವೊಂದೇ ದೊಡ್ಡ ಅಸ್ತ್ರ! ಅದನ್ನ ಗಳಿಸಿ ನಮ್ಮ ಬದುಕಿನ ಬತ್ತಳಿಕೆಗೆ ಸೇರಿಸಿ,ಸಕಾಲಕ್ಕೆ ಆ ಅಸ್ತ್ರದ ಪ್ರಯೋಗ ಮಾಡಿ ಯಶಸ್ಸು ಸಾಧಿಸದಾಗ ಮಾತ್ರ ನಾವು ಬಾಬಾಸಾಹೇಬರ ಅನುಯಾಯಿಗಳಾಗಲು ಸಾಧ್ಯ ಎಂಬುದನ್ನ ನಾವು ಅರ್ಥಮಾಡಿಕೊಳ್ಳಬೇಕು.

**ಆತ್ಮಾವಲೋಕನದ ಸಮಯ**

ಈಗ ನಮ್ಮನ್ನೆ ನಾವು ಆತ್ಮಾವಲೋಕನ ಮಾಡಿಕೊಳ್ಳೋಣಾ. ನಮ್ಮ ಮನೆಯಲ್ಲಿ ಎಷ್ಟು ಮಂದಿ ಇದ್ದೇವೆ, ಅವರಲ್ಲಿ ಎಷ್ಟು ಜನ ಸುಶಿಕ್ಷಿತರಾಗಿ ತಮ್ಮ ಕಾಲಮೇಲೆ ತಾವು ನಿಂತುಕೊಂಡಿದ್ದಾರೆ? ಮಹಿಳೆಯರ ಶಿಕ್ಷಣ-ಕ್ಕೆ ಎಷ್ಟು ಒತ್ತು ಕೊಟ್ಟಿದ್ದೇವೆ? ನಮ್ಮ ಮನೆಯ ಮಗಳು ಸ್ವಾಲಂಬಿಯಾಗಿ ಸುಶಿಕ್ಷಿತಳಾಗಿ ಜೀವನ ನಡೆಸುತಿದ್ದಾಳಾ? ಪದವಿಧರರ ಸಂಖ್ಯೆ ಎಷ್ಟಿದೆ? ಕೆಎಎಸ್,ಐಎಎಸ್ ಎಷ್ಟು ಮಂದಿ ಪಾಸಾಗಿದ್ದಾರೆ? ಶಿಕ್ಷಣ ಪಡೆದು ಉನ್ನತ ಕೆಲಸ ಗಿಟ್ಟಿಸಿಕೊಂಡು ಅಂತರ್ಜಾತಿ ವಿವಾಹವಾಗಿ ಸಮಾನತೆಯ ಮೆಟ್ಟಿಲು ಹತ್ತಿ ಇತರರಿಗೆ ಮಾದರಿಯಾದವರು ಎಷ್ಟು ಮಂದಿ ಇದ್ದಾರೆ? ಹೀಗೆ ಯೋಚಿಸಿ ನೋಡಿದರೆ ನಾವು ಬಾಬಾ ಸಾಹೇಬರು ಹಾಕಿಕೊಟ್ಟ ಹಸನಾದ ಜ್ಞಾನ ಮಾರ್ಗದಲಿ ನಡೆಯುತಿದ್ದೇವಾ,ಇಲ್ಲವಾ ಎಂದು ನಮಗೆ ಸ್ಪಷ್ಟವಾಗಿಬಿಡುತ್ತದೆ!

**ಶಿಕ್ಷಣ ಮೊಟಕುಗೊಳಿಸದಂತೆ ನಾವೇನು ಮಾಡಬೇಕು**

1) ಹದಿಹರೆಯದಲ್ಲಾಗುವ ವಯೋಸಹಜ ಆಕರ್ಷಣೆಗೆ ಒಳಗಾಗಬಾರದು:

ಇತ್ತೀಚಿನ ದಿನಗಳಲ್ಲಿ ಮದುವೆಯ ವಯಸ್ಸಿಗೆ ಬರುವ ಮೊದಲೇ ಪರಸ್ಪರ ಆಕರ್ಷಣೆಗೆ ಒಳಗಾಗಿ ಮನೆಯವರ ಒಪ್ಪಿಗೆಯಿಲ್ಲದೆ ಮದುವೆಯಾಗಿ ಸಂಕಷ್ಟಕ್ಕೆ ಸಿಲುಕಿ ನಲುಗಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆ ಹೆಚ್ಚಾಗುತಿದ್ದು, ಅದು ಪ್ರತಿನಿತ್ಯದ ಖಾಯಂ ಸುದ್ದಿಯಾಗಿಬಿಟ್ಟಿದೆ! ಇದರ ಪರಿಣಾಮವಾಗಿ ಹೃದಯ ವಿದ್ರಾವಕಗೊಳಿಸುವ ಮರ್ಯಾದಾಹತ್ಯೆಗಳು ಬೇರೆ ಸಂಭವಿಸುತ್ತಿವೆ! (ಹೆತ್ತಪ್ಪನಿಂದಲೆ ಮಗಳ ಕೊಲೆ,ಹುಬ್ಬಳ್ಳಿ,ಮೈಸೂರು) ಒಂದು ವೇಳೆ ಆ ಜೋಡಿಗಳು ಉನ್ನತ ಶಿಕ್ಷಣ ಮುಗಿಸಿ ನೌಕರಿ ಪಡೆದುಕೊಂಡು ಸ್ವಾವಲಂಬಿಗಳಾಗಿದ್ದರೆ ಇಂತಹ ಮರ್ಯಾದಾಹತ್ಯೆಗಳು ನಡೆಯುತ್ತಿರಲಿಲ್ಲ ಅಲ್ಲವೇ? ಏಕೆಂದರೆ ಕೀಳು ಜಾತಿಯೆಂಬ ಭಾವನೆಯನ್ನ ಅಳಿಸಿ ಹಾಕುವ ಶಕ್ತಿ ಶಿಕ್ಷಣಕ್ಕೆ ಮಾತ್ರ ಇದೆ. ಅದನ್ನರಿತು ಶಿಕ್ಷಣ ಪೂರ್ಣಗಿಳಿಸುವ ಕಡೆ ನಾವು ಏಕಾಗ್ರತೆ ವಹಿಸಬೇಕು.

ಎಲ್ಲಾ ಸೆಟಲ್ ಆದ ಮೇಲೆ ಪ್ರೇಮ & ಮದುವೆ ಎರಡೂ ಸುಗಮವಾಗಿ ಬಿಡುತ್ತವೆ. ಯಾರ ವಿರೋಧವೂ ಇರುವುದಿಲ್ಲ, ಜಾತಿಯ ವಿವಾದವೂ ಸಹ! ಇದನ್ನ ಇಂದಿನ ಯುವಕ/ತಿಯರಿಗೆ ಮನದಟ್ಟು ಮಾಡಿಸಬೇಕು. ಇದಕ್ಕೆ ಪೂರಕವಾದ ವಾತಾವರಣವನ್ನು ಶಿಕ್ಷಕರು ಪೋಷಕರು & ಸಮಾಜ ನಿರ್ಮಾಣ ಮಾಡಿಕೊಡಬೇಕು. ಶಿಕ್ಷಣವೇ ಮೊದಲು ಎಂದು ಜಪ ಮಾಡುವಂತೆ ಸಿದ್ಧಗೊಳಿಸಬೇಕು. ಶಿಕ್ಷಣ ಮೊಟಕುಗೊಳಿಸಿ ಜೀವನ ಹಾಳು ಮಾಡಿಕೊಂಡವರ ಉದಾಹರಣೆ ನೀಡಿ ಆ ತಪ್ಪು ಇವರಿಂದ ಆಗದಂತೆ ಜಾಗೃತಿ ಮೂಡಿಸಬೇಕು.

2) 'ಮಗಳೆಂಬ ಭಾರ ಇಳಿಯುವುದು ಮದುವೆಯಿಂದ' ಎಂಬ ದುರಾಲೋಚನೆಯಿಂದ ದೂರವಿರಬೇಕು:

ಅದೆಷ್ಟೋ ಪೋಷಕರು ಮಗಳು ಋತುಮತಿಯಾದರೆ ಸಾಕು, ಅಂದಿನಿಂದಲೇ ಆಕೆಯನ್ನು ಮಮತೆಯ ಮಗಳಾಗಿ ನೋಡುವ ಬದಲು ಜವಾಬ್ದಾರಿ,ರಕ್ಷಣೆ ಎಂಬ ಹೆಸರಲಿ ಇಲ್ಲಸಲ್ಲದ ನಿರ್ಬಂಧಗಳನ್ನ ಹೇರಿ ಅಸಹಜವಾಗಿ ಬದುಕುವಂತೆ ಮಾಡಿಬಿಡುತ್ತಾರೆ. ಮಗಳ ಬದುಕ ಬಗ್ಗೆ ಚಿಂತನೆ ನಡೆಸುವ ಬದಲು ಚಿಂತೆ ಮಾಡಿ,ಶಿಕ್ಷಣ ಮೊಟಕುಗೊಳಿಸಿ ಅವಸರದಲಿ ಗಂಡು ಹುಡುಕಿ ಮದುವೆ ಮಾಡಿಯೇ ಬಿಡುತ್ತಾರೆ. ಇನ್ನೆಲ್ಲಿ ಬಾಬಾಸಾಹೇಬರ ಕನಸು ನನಸಾಗುವುದು?

"ಒಂದು ಸಮುದಾಯದ ಪ್ರಗತಿಯನ್ನು ನಾನು ಆ ಸಮುದಾಯದ ಮಹಿಳೆಯರ ಪ್ರಗತಿಯಿಂದ ಅಳೆಯುತ್ತೇನೆ' ಎಂದು 1942ರಲ್ಲಿ ನಾಗಪುರದಲ್ಲಿ ಮಾಡಿದ ಭಾಷಣವೊಂದರಲ್ಲಿ ಅಂಬೇಡ್ಕರ್ ಅವರು ಹೇಳಿದ್ದರು.

ಅವರು ಮಹಿಳೆಯರ ಶಿಕ್ಷಣಕ್ಕೆ ಎಷ್ಟು ಒತ್ತು ನೀಡಿದ್ದರು ಎಂಬುದು ಈ ಮಾತಿನಿಂದ ಅರ್ಥವಾಗುತ್ತದೆ. ತಾಯಿಯೆ ಮೊದಲ ಗುರುವಾದ್ದರಿಂದ ಆಕೆಯ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಶಿಕ್ಷಣ ಕೊಡಿಸಬೇಕು. ಯಾವುದೇ ಕಾರಣಕ್ಕೂ ಆಕೆಯ ಶಿಕ್ಷಣ ಮೊಟಕುಗೊಳಿಸಿದಂತೆ ಎಚ್ಚರ ವಹಿಸಬೇಕು. ಶಿಕ್ಷಣ ಪೂರೈಸಿದರೆ ಆಕೆಯ ಬದುಕು ಭದ್ರವಾಗುತ್ತದೆ ಎಂಬುದನ್ನ ಪೋಷಕರು ಅರ್ಥ ಮಾಡಿಕೊಂಡು ಶಿಕ್ಷಣಕ್ಕೆ ಹೆಚ್ಚು ಮಹತ್ವ ನೀಡಬೇಕು. ಅವಸರಕ್ಕೆ ಮದುವೆ ಮಾಡಿ ಮಗಳ ಜೀವನ ಹಾಳು ಮಾಡುವ ಬದಲು ಶಿಕ್ಷಣ ಕೊಡಿಸಿ ಸ್ವಾಲಂಬಿಯಾಗಿ ಬದುಕುವಂತೆ ಪ್ರೇರೇಪಿಸಬೇಕು. 'ಅಂಬೇಡ್ಕರ್ ವಾದಿಗಳೆಂದರೆ ಸ್ತ್ರೀ ವಾದಿಗಳು' ಎಂಬ ಮಾತಿನಂತೆ ಮಹಿಳೆಯ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಬೇಕು.

3)ಆಡಂಬರದ ಅಭಿಮಾನದಿಂದ ದೂರವಿದ್ದು ಅರಿವಿಗೆ ಹತ್ತಿರವಾಗುವುದು:

'ಅನುಯಾಯಿಗಳು' ಎಂಬ ಪದ 'ಆಡಂಬರದ ಅಭಿಮಾನ' ಎಂಬ ಪರ್ಯಾಯ ಅರ್ಥ ಪಡೆದುಕೊಂಡಿದಿಯೇನೊ ಎಂಬಂತೆ ಇಂದಿನ ಯುವಕರು ವರ್ತಿಸುತಿದ್ದಾರೆ. ಬಣ್ಣ ಬಣ್ಣದ ಶಲ್ಯ ಹಾಕಿಕೊಂಡು ಡಿಜೆ ಹಾಕಿ ಕುಣಿದು ಕುಪ್ಪಳಿಸಿದರೆ ನಾನು ದೊಡ್ಡ ಅನುಯಾಯಿ ಎಂಬ ಅಂ-ಧಾಭಿಮಾನದಲಿ ಮುಳುಗಿ ತಮಗರಿವಿಲ್ಲದೆ ತಮ್ಮ ಜೀವನವನ್ನ ಅಜ್ಞಾನದ ಕೂಪದಲ್ಲಿ ಬಿಳಿಸಿ ಮೇಲೆದ್ದಳಲಾಗದೆ ಒದ್ದಾಡುತಿದ್ದಾರೆ! ಅಬ್ಬರದ ಪ್ರಚಾರ ಹಾರ,ಶಾಲು,ಕುಣಿತ ಇವುಗಳಿಂದ ಹೊರ ಬಂದು ಅರಿವಿನ ಮೊರೆ ಹೋಗಬೇಕಿದೆ.

ಬಾಬಾಸಾಹೇಬರು ಹೇಳಿದಂತೆ, ನಮ್ಮಲಿ ಎರಡು ರೂಪಾಯಿ ಇದ್ದರೆ, ಒಂದು ರೂಪಾಯಿ ಊಟಕೆ ಮತ್ತೊಂದು ರೂಪಾಯಿ ಶಿಕ್ಷಣಕೆ ಮೀಸಲಿಡಿ ಎಂಬ ಮಾತನ್ನ ಅರಿತು ಅದರಂತೆ ಯುವಕರು ಶಿಕ್ಷಣ ಮೊಟಕುಗೊಳಿಸದಂತೆ ಜಾಗೃತಿ ಮೂಡಿಸಬೇಕಿದೆ. ಅದರೊಟ್ಟಿಗೆ ಬಾಬಾಸಾಹೇಬರ ಮತ್ತೊಂದು ಮೌಲ್ಯಯುತವಾದ ಮಾತು, "ಶಿಕ್ಷಣದ ಮೂಲಕ ಜನರ ಚಾರಿತ್ರ್ಯ ನಿರ್ಮಾಣ ಆಗದಿದ್ದರೆ ಅಂಥವರಿಂದ ಸಮಾಜಕ್ಕೆ ಯಾವ ಪ್ರಯೋಜನವೂ ಇಲ್ಲ. ಚಾರಿತ್ರ್ಯ ಹಾಗೂ ನಮ್ರತೆಯಿಲ್ಲದ ಶಿಕ್ಷಿತ ವ್ಯಕ್ತಿ ಪ್ರಾಣಿಗಿಂತಲೂ ಹೆಚ್ಚು ಅಪಾಯಕಾರಿ.

ಆತನ ಮನಸ್ಥಿತಿ ಜನಸಾಮಾನ್ಯರ ಏಳ್ಗೆಗೆ ವಿರುದ್ಧವಾಗಿದ್ದರೆ ಆತ ಸಮಾಜ-ಕ್ಕೊಂದು ಶಾಪ. ಚಾರಿತ್ರ್ಯವು ಶಿಕ್ಷಣಕ್ಕಿಂತಲೂ ಮುಖ್ಯವಾದದ್ದು" (ಇದು 1938ರಲ್ಲಿ ನಡೆದ ಮುಂಬೈ ಪ್ರಾಂತ ಶೋಷಿತ ವರ್ಗಗಳ ಯುವಸಮ್ಮೇಳನದಲ್ಲಿ ಅಂಬೇಡ್ಕರ್ ಅವರಾಡಿದ ಮಾತು)ಇದನ್ನ ಇಂದಿನ ಮಕ್ಕಳ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಮಾಡಬೇಕು. ಆಗ ನಾವು ನಿರೀಕ್ಷಿಸಿದಂತೆ ಅವರ ಆಲೋಚನೆಗಳು ಉನ್ನತವಾಗುತ್ತಾ ಹೋಗುತ್ತವೆ. ನಿಜವಾದ ಅನುಯಾಯಿಯೆಂದರೆ,ನಾವು ಪ್ರೀತಿಸುವ & ಅನುಸರಿಸುವ ನಮ್ಮ ನಾಯಕರು,ದಾರ್ಶನಿಕರು ಪಾಲಿಸಿದ ತತ್ವಕ್ಕೆ ನಾವು ಅಂಟಿಕೊಳ್ಳಬೇಕೆ ವಿನಾ ಅವರ ಹೆಸರಿಗಲ್ಲ! ಎಂಬುದರ ಅರಿವು ಮೂಡಿಸಬೇಕಿದೆ.

ಶಿಕ್ಷಣ ಕುರಿತು ಹೀಗೆ ಜಾಗೃತಿ ಮೂಡಿಸುವ ಮೂಲಕ ಶಿಕ್ಷಿತರಾಗಿರಿ! ಸಂಘಟಿ-ತರಾಗಿರಿ! ಪ್ರತಿಭಟಿಸಿ!' ಎಂಬ ಬಾಬಾಸಾಹೇಬರ ಪ್ರಸಿದ್ಧ ಘೋಷಣೆಗೆ ಜೀವ ತುಂಬುವ ಮೌಲಿಕ ಕಾರ್ಯ ಮಾಡೋಣಾ. ಏಕೆಂದರೆ,ಶಿಕ್ಷಣವೇ ಸಮಾಜದ ಎಲಾ ಕಾಯಿಲೆಗಳಿಗೆ ದಿವ್ಯ ಔಷಧವಾಗಿದೆ. ಬಾಲ್ಯದಿಂದಲೂ ಶೋಷಣೆ, ನಿರ್ಲಕ್ಷ್ಯ, ಅವಮಾನಗಳಿಗೆ ಒಳಗಾದ ಅಸ್ಪೃಶ್ಯ ಭೀಮರಾವ್ ಅಂಬೇಡ್ಕರ್ ಅವರು ಇಂದು ದೇಶಕಂಡ ಅಪರೂಪದ ವಿದ್ವಾಂಸರಾಗಿ, ಸಂವಿಧಾನ ಶಿಲ್ಪಿಯಾಗಿ, ದಮನಿತರ ದನಿಯಾಗಿ ಬೆಳೆದುದರ ಹಿಂದೆ ಇದ್ದುದು ಇದೇ ಶಿಕ್ಷಣವೆಂಬ ಶಕ್ತಿ ಎಂಬುದನ್ನ ನಾವು ಸದಾ ನೆನಪಿನಲಿಟ್ಟುಕೊಂಡು ಆ ಹಾದಿಯಲ್ಲೆ ಸಾಗೋಣಾ. ಆಗ ಮಾತ್ರ ನಾವು ಅಂಬೇಡ್ಕರ್ ಅವರ ಅನುಯಾಯಿ ಎಂದು ಹೆಮ್ಮೆಯಿಂದ ಹೇಳಬಹುದು! ಅಲ್ಲವೇ?



ಡಿ.ಶಬ್ರಿನಾ ಮಹಮದ್ ಅಲಿ,ಚಳ್ಳಕೆರೆ

# ಜಾರಿ(ರ)ದ ಮನ

**ಸುಕೋಮಲೆಯಾದ ಹೆಣ್ಣು ಸುಂದರವಾಗಿ ಬಿರಿದು, ಅರಳಿ ನಯನ ಮನೋಹರವಾದ ಸುಮವಾಗಿ ತನ್ನ ಸುತ್ತಲಿನ ಇತರ ಜೀವಗಳಿಗೆ ಸುವಾಸನೆ ಬೀರಬಲ್ಲಲು. ಇರುವಷ್ಟೂ ದಿನ ಸೌಂದರ್ಯ ಕು-ರಿತ ಅವಳ ಕಾಳಜಿ ನಿತ್ಯನೂತನ. ಮೊದಲ ಬಿಳಿ ಕೂದಲು ನೋಡಿ ಹೌಹಾರುವ, ಕಣ್ಣಿನ ಸುತ್ತ ಬಿದ್ದ ಕಪ್ಪು ಕಲೆಗಳನ್ನು ನೋಡಿ ಮರುಗುವ, ನೆರಿಗೆ ಬೀಳಬಹುದೆಂಬ ಭಯದಿಂದ ಬೆಚ್ಚಿ ಬೀಳುವ ಹೆಣ್ಣಿಗೆ ಸೌಂದರ್ಯವೇ ಉಸಿರು.**

ವಯಸ್ಸಾದರೂ ವಯಸ್ಸಾಗಿಲ್ಲವೆಂದು ತೋರಿಸಿಕೊಳ್ಳುವ ಹುಮ್ಮಸ್ಸು. ಮಧ್ಯ ವಯಸ್ಸಿನಲ್ಲಿ ತಮ್ಮ ಬಗ್ಗೆ ಕಾಳಜಿ ವಹಿಸಬೇಕೆಂದು ಅಂ-ದುಕೊಂಡರೂ ಸಹ ಅವಳ ಹೆಗಲಲ್ಲಿ ಜೋತಾಡುವ ಅನೇಕ ಜವಬ್ದಾರಿಗಳ ಮೂಟೆಯಲ್ಲಿ ಅವಳು ಅವಳಿಗೆ ನೀಡುವ ಪ್ರಾಶಸ್ತ್ಯ ಕೊನೆಯದ್ದಾಗಿರುತ್ತದೆ. ಎಲ್ಲರ ಇಷ್ಟ ಕಷ್ಟಗಳನ್ನು ಅಳೆದು ತೂಗಿ ಕೊನೆಗೊಮ್ಮೆ ಅವರನ್ನು ಗುರಿ ಮುಟ್ಟಿಸುವಲ್ಲಿ ಹೈರಾಣಾಗಿ ಬಿಟ್ಟಿರುತ್ತಾಳೆ. ಮಡಿಲಿನಿಂದ ಮಕ್ಕಳು ಇಳಿದು ಶಾಲೆ ಕಡೆಗೆ ಮುಖ ಮಾಡಿ ಹೊರಟಾಗ ಅವಳಿಗೆ ಸಣ್ಣ ಮಟ್ಟಿನ ರಿಲೀಫ್. ಮಕ್ಕಳು ನೆರೆಯುತ್ತಾ ಸಾಗಿದಂತೆ ತಾಯಿಯ ಅವಲಂಬನೆ ಕಡಿಮೆ ಆಗುತ್ತದೆ. ಅವರ ಆಸಕ್ತಿ, ಗೆಳೆಯರು ಹೀಗೆ ವಿಭಿನ್ನ ಪ್ರಪಂಚದೊಳಗೆ ನುಸುಳುತ್ತಾ ಹೋದಂತೆ ತಾಯಿ ಕೊಂಚ ಸಾವ-ರಿಸಿಕೊಳ್ಳುವಳು. ಆಗ ಅವಳು ತನ್ನ ಮನೆ, ಕೆಲಸ, ಮಕ್ಕಳು ಸಂಸಾರ ನೌಕೆ ಎಲ್ಲವನ್ನು ಸರಿದೂಗಿಸಿಕೊಂಡು ಹೋಗಬಲ್ಲಲು.

ಬಾಲ್ಯದಲ್ಲಿ ತಂದೆ ತಾಯಿಯ ಆರೈಕೆಯಲ್ಲಿ ಬೆಳೆಯುವ ಮಕ್ಕಳು ಹದಿಹರೆಯಕ್ಕೆ ಕಾಲಿಟ್ಟು ಬಾಲ್ಯವೆಂಬ ಬಾಲಿಶತನ ತೊಲಗಿ ಪ್ರೌಢರಾಗುತ್ತಾರೆ. ದೈಹಿಕ ಬದಲಾವಣೆಗಳನ್ನು ಹೊಂದಿ ಮಾನಸಿಕವಾಗಿ ತಾವು ಪ್ರಬುದ್ಧರಾಗುತ್ತಾರೆ. ಸರಿ ತಪ್ಪುಗಳ ಲೆಕ್ಕಚಾರ, ಒಳಿತು ಕೆಡುಕುಗಳ ವ್ಯತ್ಯಾಸಗಳು, ವಿಭಿನ್ನ ಲಿಂಗದವರಲ್ಲಿ ಆಸಕ್ತಿ, ಪ್ರೀತಿ ಪ್ರೇಮ ಪ್ರಣಯ, ವಿರಹ ಹೀಗೆ ನೂರಾರು ಭಾವಗಳ ಮೂಸೆಯಲ್ಲಿ ಮಿಂದೆದ್ದು ಪರಿಪಕ್ವರಾಗುತ್ತಾರೆ. ಶಿಕ್ಷಣ ಪಡೆದು ಉದ್ಯೋಗ ಗಳಿಸಿ ತಮ್ಮದೇ ಆದ ಪುಟ್ಟ ಪ್ರಪಂಚವನ್ನು ಮದುವೆ ಎಂಬ ಬಂಧದೊಳಗೆ ತಂದು ಸಂಸಾರ ಆರಂಭವಾಗುತ್ತದೆ. ಸಾಂಸಾರಿಕ ಜೀವನದ ಕುರಿತು ಪಾಠ ಯಾರೂ ಹೇಳಿಕೊಡುವವರಿಲ್ಲ. ಶಿಕ್ಷಣವು ಅಂಕಗಳಿಕೆಗಾಗಿ ಮತ್ತು ಉದ್ಯೋಗ ಗಿಟ್ಟಿಸಿಕೊಳ್ಳಲು ಮಾತ್ರ ಸಹಾಯಕ.



ತನ್ನ ಭಾವನೆಗಳನ್ನು ಸಮಯಕ್ಕೆ ಸರಿಯಾಗಿ ಹತೋಟಿಯಲ್ಲಿ ಇಟ್ಟುಕೊಳ್ಳದವರು, ಮನದಿಂಗಿ-ತವನ್ನು ಎದುರಿಗೆ ಇರುವವರಿಗೆ ಅರ್ಥವಾಗುವಂತೆ ಹೇಳಲಾಗದವರು, ಒಂದೇ ಸೂರಿನಡಿಯಲ್ಲಿದ್ದು ಇನ್ನೊಂದು ಜೀವಕ್ಕೆ ಆಸರೆಯಾಗದವರು ಇವ-ರಿಂದ ಏನನ್ನು ನಿರೀಕ್ಷಿಸಬಹುದು? ಹಾಗಾಗಿ ನಾವು ವಿದ್ಯಾವಂತರು ಬುದ್ಧಿವಂತರಾಗುತ್ತಾ ಹೋದಂತೆ ನಮ್ಮ ಅಂತಃಕರಣ ಜಾಗೃತರಾಗುತ್ತಾ ಸಾಗಬೇಕು. ಮೌನವನ್ನು ಅರ್ಥ ಮಾಡಿಕೊಳ್ಳಬಲ್ಲ, ನಿಟ್ಟಿಸಿರನ್ನೂ ಗ್ರಹಿಸಬಲ್ಲ, ಮುಖ ನೋಡಿಯೋ ಮನದಿಚ್ಛೆಯನ್ನು ಅರಿಯ ಬಲ್ಲ ಸಂಗಾತಿ ಸಿಕ್ಕರದೇ ಸ್ವರ್ಗ. ಭಾವನೆಗಳ ಮೂಸೆಯಲ್ಲಿ ಮಿಂದೆದ್ದು ಪುನೀತರಾದ ನಮಗೆ ಏರುತ್ತಿರುವ ವಯಸ್ಸಿನಲ್ಲಿ ದೇಹ ಮತ್ತು ಮನಸ್ಸನ್ನು ಹಾಗೂ ಭಾವನೆಗಳನ್ನು ನಿಯಂತ್ರಣದಲ್ಲಿಟ್ಟು ಕೊಳ್ಳುವುದು ದೊಡ್ಡ ಸಾಹಸ. ನಮ್ಮ ಮೇಲಿನ ನಿರೀಕ್ಷೆಗಳು ನೂರಾರು. ಮನೆ, ಸಂಸಾರ, ಮಕ್ಕಳ ವಿದ್ಯಾಭ್ಯಾಸ, ಅವರ ಬೇಡಿಕೆಗಳು, ಉದ್ಯೋಗ, ಮುಪ್ಪಿನ ತಂದೆ ತಾಯಿಯರ ಜವಬ್ಧಾರಿ ಹೀಗೆ ದೊಡ್ಡ ಪಟ್ಟಿಯೇ ಬೆಳೆದಿರುತ್ತದೆ. ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದರೂ ದುಡಿಯುವ ಮಹಿಳೆಯ ಮೇಲೆ ಉದ್ಯೋಗ ಕ್ಷೇತ್ರ ಹೇರುವ ಒತ್ತಡವೂ ಅಧಿಕ. ನೆಟ್ಟಗೆ ನಿಲ್ಲಲ್ಲು ಆಗದವರಿಗೆ ಬೆಟ್ಟವನ್ನು ಹತ್ತು ಅಂದಂತೆ ಸರಿ.

ನಿಧಾನವಾಗಿ ನಮ್ಮ ದೇಹದಲ್ಲಿನ ಬದಲಾವಣೆಗಳು ನಮ್ಮ ಮನಸ್ಸಿನ ಮೇಲೂ ಪ್ರಭಾವ ಬೀರಿ ಕೆಲಸದ ಕ್ಷಮತೆಯನ್ನು ಕಡಿಮೆಗೊಳಿಸುತ್ತದೆ. ಜ್ಞಾನ ಹೆಚ್ಚಿಸಿಕೊಳ್ಳುವ ಓದು, ಹೊಸ ಕಲಿಕೆ ಯಾವುದಕ್ಕೂ ಒಂದು ಜಡತೆ ಆವರಿಸಿ ಕೊಂಡಂತೆ. ಮೊದಲ ಮಳೆಗೆ ನವಿಲಿನಂತೆ ನರ್ತಿಸುತ್ತಿದ್ದ ಮನವು ಪ್ರಾಯದ ಪಾಕದಲ್ಲಿ ಜಾರಿ ಹೋಗಿರುತ್ತದೆ. ಚಿಗರೆಯ ಮರಿಯಂತೆ ಕುಣಿದಾಡುವ ಹುಮ್ಮಸ್ಸು ಆಮೆ ನಡಿಗೆಯಂತೆ ಕುಂಟಲಾರಂಭಿಸುತ್ತದೆ. ಮೊದಲ ಸೂರ್ಯ ರಶ್ಮಿಗೆ ಮೈ ಕೊಡವಿ ಎದ್ದು ತನ್ನ ಪಕಳೆಗಳನ್ನು ಬಿರಿದು ಅರಳಿ, ಸುವಾಸನೆ ಬೀರುವ ಹೂವಿನಂದದ ಮುಖವು ಕಣ್ಣಿನ ಕಾಂತಿ ಕಳೆದುಕೊಂಡು, ಕಣ್ಣಿನ ಸುತ್ತಲಿನ ಕಪ್ಪು ವರ್ತುಲವು ಸೌಂದರ್ಯಕ್ಕೆ ಕಪ್ಪು ಚುಕ್ಕೆ ಆಗುತ್ತದೆ. ಸದಾ ಕಾರಂಜಿಯಂತೆ ಚಿಮ್ಮುವ ಮನಸ್ಸು ಒಂದು ಹೆಜ್ಜೆ ತೆಗೆಯಲು ಬಿಡಲಾದಂತಾಗುತ್ತದೆ. ವಯೋ ಸಹಜವಾಗಿ ಕಾಣಿಸುವ ಒಂದೊಂದೇ ಕಾಯಿಲೆಗಳು ನಮ್ಮ ಜೀವವನ್ನು ಹಿಡಿದು ಹಿಪ್ಪೆ ಮಾಡಿರುತ್ತದೆ.

ಹುಣ್ಣಿಮೆಯ ಪೂರ್ಣ ಚಂದಿರ, ಉಕ್ಕಿ ಬರುವ ಸಮುದ್ರ ಎಲ್ಲವೂ ಉಪ್ಪಿಲ್ಲದ ಅಡುಗೆಯಂತೆ ತೀರಾ ಸಪ್ಪೆ. ದೇಹಕ್ಕೆ ವಯಸ್ಸಾದೀತು ಆದರೆ ಮನಸ್ಸಿಗೆ? ಮನಸ್ಸೊಂದು ಅದ್ಭುತ ಯಂತ್ರ. ಅದರ ಶಕ್ತಿ ಸಾಮರ್ಥ್ಯದ ಅರಿವೂ ಸೀಮೆಗೆ ನಿಲುಕದು. ಈಗ ತಾನೇ ಅರಳಿ ಸೂರ್ಯ ರಶ್ಮಿಯ ಮೊದಲ ಸ್ಪರ್ಶಕ್ಕೆ ಪುಳಕಗೊಂಡು ನಾಚಿ ನೀರಾಗಿ ತಾನು ರಂಗುರಂಗಾಗಿ ನೋಡುವ ಕಣ್ಮನಗಳ ತಣಿಸುವ ಸುಮದಂತೆ ಅದನ್ನು ಜತನದಲ್ಲಿ ಕಾಪಿಡುವ ಹೊಣೆಯೂ ನಮ್ಮದೇ. ಕಾಲಕಾಲಕ್ಕೆ ಪಾತಿ ಮಾಡಿ ನೀರೆರೆದು, ಗೊಬ್ಬರ ಹಾಕಿ ಮನವೆಂಬ ಸುಮವನ್ನು ನಿತ್ಯ ಸೌಂದರ್ಯ ಸೂಸಿಪ, ಕೋಮಲಾಂಗಿ ಹೂವಿನಂತೆ ಸುಂದರವಾಗಿಸುವ ಕಾಯಕವೂ ನಮ್ಮದೇ. ನಮ್ಮ ಜೊತೆಗಾರರನ್ನು ಆರಿಸುವ ಹೊಣೆಯೂ ನಮ್ಮದು.

ಧನಾತ್ಮಕವಾಗಿ ಮಾತನಾಡುವ, ಬಿದ್ದಾಗ ಎತ್ತುವ, ಸಾಧಿಸಿದಾಗ ಬೆನ್ನನ್ನು ತಟ್ಟುವ, ಹೊಗಳಿ ಅಟ್ಟಕೇರಿಸದಿದ್ದರೂ ಯೂ ಕ್ಯಾನ್ ಡೂ ಇಟ್ ಎಂದು ಬೆಂಬಲಿಸುವ, ಸೋತು ಸುಣ್ಣವಾಗುವ ಮೊದಲೇ ಗಮನಿಸಿ ಸರಿದಾರಿಗೆ ತರುವ ಒಬ್ಬ ಆಪ್ತ ಸ್ನೇಹಿತೆ ನಮ್ಮ ಬದುಕಿನಲ್ಲಿದ್ದರೆ ಅರ್ಧ ಗೆದ್ದಂತೆ. ಗುರು ಹಿರಿಯರನ್ನು ಗೌರವಿಸುವ, ತನ್ನ ಜೀವನಕ್ಕೆ ಜಂಟಿಯಾದ ಜೀವದ ಭಾವಗಳಿಗೆ ತಂತಿಯಾಗುವ ಮೂಲಕ ಒಳ್ಳೆಯ ಸುಸ್ವರ ಮೀಟುವ, ಮನೆಯಲ್ಲಿ ಇದ್ದುದ್ದರಲ್ಲೆ ಜತನದಿ ಅಡುಗೆ ಮಾಡಿ ನಗುಮುಖದಿ ಬಡಿಸುವ, ಅವರಿವರ ಕಂಡು ಈರ್ಷ್ಯೆ ಪಡದ, ಮುಖವಾಡವಿಲ್ಲದ ಮುಖ, ಒಳಗೊಂದು ಹೊರಗೊಂದು ಇಟ್ಟುಕೊಳ್ಳದ ಭಾವ, ಸರ್ವರನ್ನೂ ಗೌರವಿಸುವ ಮಹಿಳೆ ಸರ್ವ-ರಿಂದ ಗೌರವಿಸಲ್ಪಡುವಳು. ಎಲ್ಲೆ ಮೀರಿ ಜಾರುವ ಮನಸ್ಸನ್ನು ಜೋಪಾನದಲ್ಲಿ ಹಿಡಿದು ಗು-ರಿಯತ್ತ ಮುನ್ನುಗ್ಗುವ ಅಂದದ ನೀರೆಯರೇ ಪ್ರತಿ ಮನೆಯ ನಿಜವಾದ ಆಸ್ತಿ. ಜಾರುವ ಮೊದಲೇ ಎಚ್ಚೆತ್ತುಕೊಳ್ಳುವ ಆಸ್ಥೆ ನಮ್ಮೆಲ್ಲರ ಕನಸು. ಜಾರುವ ಮನಸ್ಸಿಗೊಂದು ಲಗಾಮು ಹಾಕಿ ನಮ್ಮಿಚ್ಛೆಯಂತೆ ನಡೆಸಿದರೆ ಜೀವನವೇ ಒಂದು ಸುಂದರ ಕಾವ್ಯ. ನಮ್ಮವರ ಬಗ್ಗೆ ನಮಗಿರುವ ಕಾಳಜಿಯ ಜೊತೆಗೆ ನಮ್ಮನ್ನೂ ನಾವು ಇನ್ನಷ್ಟು ಪ್ರೀತಿಸುವ. ಗೌರವಿಸುವ. ಆರಾಧಿಸುವ. ದೇಹ ಮತ್ತು ಮನಸ್ಸಿನ ಪ್ರತಿ ಬೇಡಿಕೆಗಳಿಗೆ ನಮ್ಮ ಕಿವಿಯನೊಂದು ತೆರೆದಿಡುವ. ಓ ಮನವೇ ಅಳುಕದಿರು.



ವಿಮಲ ಆದರ್ಶ, ಕುಂದಾಪುರ.

# Fear Addiction

# ಸಾವಿನ ರಿಹರ್ಸಲ್ ನಿಲ್ಲಿಸಿ, ಬದುಕಲು ಶುರುಮಾಡಿ!

**ಕೆಲವು ತಿಂಗಳುಗಳ ಹಿಂದೆ ನನ್ನ ಬೆಡ್‌ರೂಮಿನಲ್ಲಿ ಮಧ್ಯರಾತ್ರಿ ಹಠಾತ್ತನೆ ಎಚ್ಚರವಾಯಿತು. ಎದೆಯ ಎಡಭಾಗದಲ್ಲಿ ಸಣ್ಣದೊಂದು ಚುಮುಚುಮು ನೋವು ಕಾಣಿಸಿಕೊಂಡಿತ್ತು. ತಕ್ಷಣ ತಲೆಯಲ್ಲಿ ಮಿಂಚಿದ್ದು ಒಂದೇ ಆಲೋಚನೆ?"ಇದೇ ಕೊನೆನಾ?" ಅದಕ್ಕೆ ಕೆಲವೇ ಗಂಟೆಗಳ ಮುನ್ನವಷ್ಟೇ ಇಂಟರ್ನೆಟ್‌ನಲ್ಲಿ 35 ವರ್ಷದ ಯುವ ನಟನೊಬ್ಬ ಜಿಮ್‌ನಲ್ಲಿ ವರ್ಕೌಟ್ ಮಾಡುವಾಗ ಹಾರ್ಟ್ ಅಟ್ಯಾಕ್ ಆಗಿ ಕುಸಿದು ಬಿದ್ದ ರೀಲ್ಸ್ ಒಂದನ್ನು ನೋಡಿದ್ದೆ. ಅಷ್ಟೇ, ನನ್ನ ಮೆದುಳು ತಕ್ಷಣವೇ ಕೆಲಸ ಮಾಡಲು ಶುರು ಮಾಡಿತು.**



ನಾನು ನನ್ನ ಪಲ್ಸ್ ರೇಟ್ ಚೆಕ್ ಮಾಡಿಕೊಳ್ಳಲು ಶುರುಮಾಡಿದೆ. ಇಂಟರ್ನೆಟ್ ಬಂದ ಮೇಲೆ ಜಗತ್ತಿನ ಯಾವ ಮೂಲೆಯಲ್ಲಿ ಸಾವು ಸಂಭವಿಸಿದರೂ, ಅದು ನೇರವಾಗಿ ನಮ್ಮ ಬೆಡ್‌ರೂಮಿಗೆ ಬಂದು ನಿಲ್ಲುತ್ತದೆ ಎಂಬುದಕ್ಕೆ ನಾನೇ ಪ್ರತ್ಯಕ್ಷ ಸಾಕ್ಷಿಯಾಗಿದ್ದೆ. ?ಯಾರೋ ಒಬ್ಬರು ವಿಡಿಯೋದಲ್ಲಿ ಸ್ಟ್ರೋಕ್ ಲಕ್ಷಣಗಳನ್ನು ಹೇಳುತ್ತಿದ್ದರೆ, ತಕ್ಷಣ ಕನ್ನಡಿಯ ಮುಂದೆ ನಿಂತು ನನ್ನ ಮುಖದ ಎರಡೂ ಬದಿ ಸರಿಯಾಗಿದೆಯೆ ಎಂದು ಪರಿಶೀಲಿಸುತ್ತಿದ್ದೆ. ನಿಜ ಹೇಳಬೇಕೆಂದರೆ, ನನಗೆ ಕೂದಲೆಳೆಯಷ್ಟೂ ಏನೂ ಆಗಿರುತ್ತಿರಲಿಲ್ಲ. ಆದರೆ ನಾನು ಮಾತ್ರ ಮನಸ್ಸಿನೊಳಗೆ ಮೂರು ಸಲ ಸತ್ತು, ಮಸಣಕ್ಕೆ ಹೋಗಿ ಬಂದಿರುತ್ತಿದ್ದೆ! ಇದನ್ನು ಇಂಗ್ಲಿಷಿನಲ್ಲಿ 'Rich Guy Syndrome' ಎನ್ನುತ್ತಾರೆ.

ಇಲ್ಲಿ 'ರಿಚ್' ಎಂದರೆ ಬ್ಯಾಂಕ್ ಬ್ಯಾಲೆನ್ಸ್ ಅಲ್ಲ. ಮನುಷ್ಯನಿಗೆ ನಾಳೆಯ ಊಟಕ್ಕೆ ಏನು ಮಾಡುವುದು? ಅನ್ನೋ ಈ ಕ್ಷಣಕ್ಕೆ ಬದುಕುವ ಹೋರಾಟ ಇಲ್ಲದೆ ಹೋದಾಗ, ನಮ್ಮ ಈ ಹಾಳು ಮೆದುಳು ಹೊಸ ಸಮಸ್ಯೆಗಳನ್ನು ಹುಡುಕಲು ಶುರುಮಾಡುತ್ತದೆ.

?ನಮ್ಮ ಹಳೆಯ ಕಾಲದ ಪೂರ್ವಜರು ಕಾಡಿನಲ್ಲಿ ಬದುಕುತ್ತಿದ್ದಾಗ ಅವರ ಭಯಗಳು ನೈಜವಾಗಿದ್ದವು. ಹುಲಿ ಬರುತ್ತಿತ್ತು, ಹಾವು ಕಚ್ಚುತ್ತಿತ್ತು, ಹಸಿವಿರುತ್ತಿತ್ತು, ಮಳೆ–ಬೆಳೆ ಹೋಗುವ ಆತಂಕವಿರುತ್ತಿತ್ತು. ಆದರೆ ಇಂದು ನಮಗೆ ಆ ರೀತಿಯ ನಿಜವಾದ ಶತ್ರುಗಳಿಲ್ಲ. ಹಾಗಾಗಿ ನಮ್ಮ ಮೆದುಳಿಗೆ ನಿರಂತರವಾಗಿ ಒಂದು ಪ್ರಚೋದನೆ, ಭಯ, ಟೆನ್ಷನ್ ಅಥ–'ವಾ ಡ್ರಾಮಾ ಬೇಕೇ ಬೇಕು. ಯಾರಾದರೂ ನಮ್ಮನ್ನು ಲವ್ ಮಾಡಬೇಕು, ಆಮೇಲೆ ಬ್ರೇಕಪ್ ಆಗಬೇಕು. ಯಾರಾದರೂ ಮೋಸ ಮಾಡಬೇಕು, ನಾವು ರಿವೇಂಜ್ ತಗೋಬೇಕು.

ಯಾರೋ ನಮ್ಮ ಇಗೋ ಹರ್ಟ್ ಮಾಡಬೇಕು. ಯಾವುದೋ ದೇಶದಲ್ಲಿ ಯುದ್ಧ ಶುರುವಾಗಬೇಕು, ನಾವು ಇಲ್ಲಿಂದ ಒಂದು ಸೈಡ್ ಸಪೋರ್ಟ್ ಮಾಡಬೇಕು. ಆಮೇಲೆ ಸಾವಿರಾರು ಕಿಲೋಮೀಟರ್ ದೂರದ ಯುದ್ಧದ ಬಗ್ಗೆ ಕುಳಿತು ಚಿಂತೆ ಮಾಡಬೇಕು. ಆ ಭಯ ಈಗ ನಮಗೆ ನೋಟಿಫಿಕೇಶನ್ ರೂಪದಲ್ಲಿ, ಬ್ರೇಕಿಂಗ್ ನ್ಯೂಸ್ ಆಗಿ, ರೀಲ್ಸ್ ಆಗಿ, ಫೇಸ್‌ಬುಕ್ ಪೋಸ್ಟ್ ಆಗಿ, ಗೂಗಲ್ ಸರ್ಚ್ ಆಗಿ ಬದಲಾಗಿದೆ. ಇದಕ್ಕೆಂದೇ ಭಯದ ವ್ಯಾಪಾರಿಗಳು ಇದ್ದಾರೆ, ಅವರು ಜ್ಞಾನದ ಹೆಸರಿನಲ್ಲಿ ನಮಗೆ ಭಯವನ್ನು ಮಾರುತ್ತಿದ್ದಾರೆ.

ನಾವೂ ಸಹ ಅದನ್ನೇ ಓದಿ ಚರ್ಚಿಸುತ್ತಾ ಅದಕ್ಕೆ ಅಡಿಕ್ಟ್ ಆಗಿಬಿಟ್ಟಿದ್ದೇವೆ, ಏಕೆಂದರೆ ನಮಗೆ ಸಮಾಧಾನ ಸಹಿಸುವುದೇ ಇಲ್ಲ! ?ಈ ಕಲ್ಪಿತ ಭಯದ ಜಾಲದಿಂದ ನಾನು ಹೊರಬರಲು ನನಗೆ ಸಹಾಯ ಮಾಡಿದ್ದು ಭಾರತದ ಆರೋಗ್ಯ ಮತ್ತು ಅಪಘಾತಗಳ ಅಂಕಿ–ಅಂಶಗಳು. ಒಮ್ಮೆ ಡೇಟಾ ಕಡೆ ಕಣ್ಣು ಹಾಯಿಸಿದರೆ ಸತ್ಯ ಏನೆಂದು ಅರ್ಥವಾಗುತ್ತದೆ. ಭಾರತದ ಸುಮಾರು 150 ಕೋಟಿ ಜನಸಂಖ್ಯೆಯಲ್ಲಿ, 18 ರಿಂದ 45 ವಯಸ್ಸಿನವರಲ್ಲಿ ವರದಿಯಾಗುವ sudden heart-attack ಸಾವುಗಳು ವರ್ಷಕ್ಕೆ ಸುಮಾರು 14,300 ಮಾತ್ರ. ಅಂದರೆ ದೇಶದ ಒಟ್ಟು ಜನಸಂಖ್ಯೆಗೆ ಹೋಲಿಸಿದರೆ ಅದು ಕೇವಲ ಶೇಕಡಾ 0.001. ಸರಳವಾಗಿ ಹೇಳಬೇಕೆಂದರೆ ಒಂದು ಲಕ್ಷ ಜನರಲ್ಲಿ ಸುಮಾರು ಒಬ್ಬರು.

ಅದೇ ಏಜ್ ಗ್ರೂಪ್‌ನಲ್ಲಿ ರಸ್ತೆ ಅಪಘಾತಗಳಿಂದ ಸಾಯುವವರ ಸಂಖ್ಯೆ ವರ್ಷಕ್ಕೆ ಸುಮಾರು 2.54 ಲಕ್ಷ. ಅಂದರೆ ಶೇಕಡಾ 0.017. ಸರಳವಾಗಿ ಹೇಳುವುದಾದರೆ ಒಂದು ಲಕ್ಷ ಜನರಲ್ಲಿ ಸುಮಾರು 17 ಜನರು. ಅಂದರೆ ಹಾರ್ಟ್ ಅಟ್ಯಾಕ್‌ನಿಂದ ಸಾಯುವವರಿಗಿಂತ ಅಪಘಾತಗಳಲ್ಲಿ ಸಾಯುವವರ ಸಂಖ್ಯೆ ಸುಮಾರು 18 ಪಟ್ಟು ಹೆಚ್ಚು!



?ಇಲ್ಲಿ ಪಾಯಿಂಟ್ ಏನೆಂದರೆ, ಹಾರ್ಟ್ ಹೆಲ್ತ್ ಅನ್ನು ಇಗ್ನೋರ್ ಮಾಡಿ ಅಂತಲ್ಲ. ಆದರೆ ಇಂಟ–ರ್ನೆಟ್‌ನಲ್ಲಿ ಯಾರೋ ಒಬ್ಬರು ಸತ್ತ ಸುದ್ದಿ ನೋಡಿದ ತಕ್ಷಣ, "ನೆಕ್ಸ್ಟ್ ನಾನೇ ಇರಬಹುದು" ಅಂತ ಪ್ಯಾನಿಕ್ ಮೋಡ್‌ಗೆ ಹೋಗಬೇಡಿ. ಒಂದು ಲಕ್ಷ ಜನರಲ್ಲಿ ಒಬ್ಬರಿಗೆ ಆಗುವ ಘಟನೆಯನ್ನು ಪ್ರತಿದಿನ ನಿಮ್ಮ ತಲೆಯೊಳಗೆ ಸಾವಿರ ಸಲ ರಿಪ್ಲೈ ಮಾಡಿಕೊಳ್ಳಬೇಡಿ. ನಮ್ಮ ರಿಸ್ಕ್ ಜೀರೋ ಅಲ್ಲ, ಯಾರದ್ದೂ ಜೀರೋ ಅಲ್ಲ. ಆದರೆ ಪ್ರಾಬಬಿಲಿಟಿ ತಿಳಿದುಕೊಂಡು ಬದುಕಿ, ಲಕ್ಷಣಗಳನ್ನು ತಿಳಿದುಕೊಂಡು ಅಲ್ಲ.

ನಾಳೆ ಹಾರ್ಟ್ ಅಟ್ಯಾಕ್ ಆಗಬಹುದು ಅಂತ ಭಯಪಟ್ಟು ಇವತ್ತು ಬದುಕೋದನ್ನ ಬಿಡಬೇಡಿ. ಡೇಟಾ ನೋಡಿದರೆ, ರಸ್ತೆಯಲ್ಲಿ ಬೇಜವಾಬ್ದಾ–ರಿಯುತವಾಗಿ ಡ್ರೈವ್ ಮಾಡೋದು, ಹೆಲ್ಮೆಟ್ ಹಾಕದೆ ಗಾಡಿ ಓಡ್ಸೋದು, ನಿದ್ದೆ ಇಲ್ಲದೆ ವಾಹನ ಓಡಿಸೋದು, ಫೋನ್ ನೋಡುತ್ತಾ ರೋಡ್ ಕ್ರಾಸ್ ಮಾಡೋದು ಇವೆಲ್ಲವೂ ನಮ್ಮ ಬದುಕಿಗೆ ಇನ್ನೂ ದೊಡ್ಡ ಪ್ರಾಕ್ಟಿಕಲ್ ಥ್ರೆಟ್. ಆದರೂ ಅವುಗಳ ಬಗ್ಗೆ ನಮಗೆ ಚಿಂತೆಯಿಲ್ಲ. ಆರಾಮಾಗಿ ಸೋಫಾ ಮೇಲೆ ಕೂತು ಹಾರ್ಟ್ ಅಟ್ಯಾಕ್ ಬಗ್ಗೆ ಚಿಂತೆ ಮಾಡೋದು, ಏನೇನೋ ಟೆಸ್ಟ್ ಮಾಡಿಸಿಕೊಂಡು ನಾರ್ಮಲ್ ಅಂತ ರಿಪೋರ್ಟ್ ನೋಡೋದು..

ಇದೆಲ್ಲ ಜಾಗೃತಿಯೂ ಅಲ್ಲ, ಪ್ರಿವೆನ್ಷನ್ನೂ ಅಲ್ಲ.. ಇದು ಕೇವಲ 'Fear Addiction'!

?ನನ್ನ ಈ ಭಯದ ದಿನಗಳಲ್ಲಿ ನಾನು ಅದೆಷ್ಟೋ ಬ್ಲಡ್ ಟೆಸ್ಟ್, ಇಸಿಜಿಗಳನ್ನು ಮಾಡಿಸಿದೆ. ಎಲ್ಲವೂ ನಾರ್ಮಲ್ ಬರುತ್ತಿತ್ತು. ಆಗ ನನಗೆ ಅರ್ಥವಾಗಿದ್ದು ಏನೆಂದರೆ, ಯಾವ ಬ್ಲಡ್ ಟೆಸ್ಟ್ ಕೂಡ ನಿಮಗೆ ಅಮರತ್ವದ ಸರ್ಟಿಫಿಕೇಟ್ ಕೊಡುವುದಿಲ್ಲ. ಯಾವ ಇಸಿಜಿಯೂ ನೀವು ಇನ್ನು 40 ವರ್ಷ ಸೇಫ್ ಅಂತ ಸ್ಟಾಂಪ್ ಹಾಕುವುದಿಲ್ಲ. ಯಾವ ವೈದ್ಯರೂ ಸಾವಿನ ಡೇಟ್ ಕ್ಯಾನ್ಸಲ್ ಮಾಡಲು ಸಾಧ್ಯವಿಲ್ಲ. ಒಂದಿನ ನಿದ್ದೆಯಲ್ಲಿ ವ್ಯತ್ಯಾಸವಾದರೆ, ಊಟದಲ್ಲಿ ಏರುಪೇರಾದರೆ ನಮ್ಮ ದೇಹ ಅದನ್ನು ಸರಿಪಡಿಸಿಕೊಳ್ಳಲು ಫೈಟ್ ಮಾಡುತ್ತಿರುತ್ತದೆ, ಅದೆಲ್ಲವೂ ಕಾಯಿಲೆಯಲ್ಲ. ನಿಜಕ್ಕೂ ಸಿರಿಯಸ್ ಅನ್ನಿಸಿದಾಗ ಅಗತ್ಯವಾಗಿ ವೈದ್ಯರ ಬಳಿ ಹೋಗಿ, ಅವರು ಹೇಳಿದ ಸಲಹೆ ಫಾಲೋ ಮಾಡಿ. ವ್ಯಾಯಾಮ ಮಾಡಿ, ಸರಿಯಾಗಿ ನಿದ್ದೆ ಮಾಡಿ, ಸಿಗರೇಟ್ ಸೇದಬೇಡಿ, ಎಣ್ಣೆ ಕಮ್ಮಿ ಮಾಡಿ, ಆದ–ಷ್ಟು ವಾಕ್ ಮಾಡಿ, ಜಿಮ್ ಹೋಗಿ, ಪ್ರೋಟೀನ್ ಫುಡ್ ತಿನ್ನಿ, ಹೆಲ್ಮೆಟ್ ಹಾಕಿ, ಸೀಟ್ ಬೆಲ್ಟ್ ಧರಿಸಿ. ದೇಹಕ್ಕೆ ನಿಜವಾಗಿಯೂ ಗಂಭೀರ ಸೂಚನೆ ಬಂದರೆ ಆಸ್ಪತ್ರೆಗೆ ಹೋಗಿ, ಆದರೆ ಪ್ರತಿಯೊಂದು ಚುಮುಚುಮು ಅನ್ನಿಸೋದನ್ನೆಲ್ಲ ಹೋಗಿ ಟೆಸ್ಟ್ ಮಾಡಿಸಿಕೊಳ್ಳಬೇಡಿ.

?ನಾಳೆ ಏನಾಗುತ್ತದೆ ಎಂದು ಈ ಭೂಮಿ ಮೇಲೆ ಯಾರಿಗೂ ಗೊತ್ತಿಲ್ಲ. ನಮಗೂ ಹಾರ್ಟ್ ಅಟ್ಯಾಕ್ ಆಗಬಹುದು, ಸ್ಟ್ರೋಕ್ ಆಗಬಹುದು ಅಥವಾ ಆಕ್ಸಿಡೆಂಟ್ ಆಗಬಹುದು.

ಆದರೆ, ಸಾಯಬಹುದು ಅನ್ನೋ ಭಯದಲ್ಲಿ ಇವತ್ತೇ ಬದುಕುವುದನ್ನು ಬಿಟ್ಟರೆ, ಅದು ಸಾವಿಗಿಂತ ದೊಡ್ಡ ನಷ್ಟ. ಈಗ ನಾನು ಪ್ರತಿದಿನ ಸಾವಿನ ರಿಹರ್ಸಲ್ ಮಾಡುವುದನ್ನು ನಿಲ್ಲಿಸಿದ್ದೇನೆ. ನನ್ನ ಕೆಲಸದ ಕಡೆ ಗಮನ ಕೊಡುತ್ತಿದ್ದೇನೆ, ನನ್ನ ಕನಸುಗಳ ಬೆನ್ನಟ್ಟುತ್ತಿದ್ದೇನೆ, ಸುತ್ತಲಿನ ಜನರನ್ನು ಪ್ರೀತಿಸುತ್ತಿದ್ದೇನೆ ಮತ್ತು ದೇಹವನ್ನು ಸರಿಯಾಗಿ ನೋಡಿಕೊಳ್ಳುತ್ತಿದ್ದೇನೆ. ನೆನಪಿಡಿ, ಬದುಕು ಅಂದರೆ ಅದೊಂದು ಗ್ಯಾರಂಟಿ ಕಾರ್ಡ್ ಅಲ್ಲ... ಅದೊಂದು ಅದ್ಭುತ ಅವಕಾಶ. ಅದನ್ನು ಪೂರ್ತಿಯಾಗಿ ಬದುಕಿ!

ಗೋವಿಂದ ರಾಜ್ ಬೂದಗುಂಪಾ
ಪತ್ರಕರ್ತರು ಜಿಬಿ ನ್ಯೂಸ್ ಕನ್ನಡ ಸುದ್ದಿ ಸಂಸ್ಥೆ






## ಮೃತ್ಯು ವಿಗೆ ಆಹ್ವಾನ ನೀಡುತ್ತಿರುವ ಆಸ್ಪತ್ರೆಯ ತಡೆಗೋಡೆ,,

ಅ.ಶ. ಸುದ್ದಿ ಗಂಗಾವತಿ

**ಗಂಗಾವತಿ: ನಗರದ ಸಾರ್ವಜನಿಕ ಆಸ್ಪತ್ರೆ ಉಪ ವಿಭಾಗದ ಹಿಂಭಾಗದಲ್ಲಿರುವ ಕಾಂಪೌಂಡ್ ಕಳೆದ ಮೂರು ತಿಂಗಳಿನಿಂದ ಸುರಿದ ಧಾರಾಕಾರ ಮಳೆಗೆ ಕಾಂಪೌಂಡ್ ಗೋಡೆ ಕುಸಿತಗೊಂಡಿದ್ದು ಜೊತೆಗೆ ವಾಲಿಕೊಂಡಿದೆ.**



ಪಕ್ಕದಲ್ಲಿ ವಿದ್ಯುತ್ ಟ್ರಾನ್ಸ್ ಫಾರ್ಮರ್ ಹೊಂದಿದ್ದು ಮುಂಗಾರು ಪ್ರವೇಶದಿಂದಾಗಿ ಯಾವುದೇ ಸಂದರ್ಭದಲ್ಲಿ ಮಳೆ ಬಂದರೂ ಸಹ ಕಾಂಪೌಂಡ್ ಗೋಡೆ ಸಂಪೂರ್ಣವಾಗಿ ಕುಸಿದು ಬೀಳುವುದರ ಜೊತೆಗೆ ವಿದ್ಯುತ್ ಟ್ರಾನ್ಸ್ ಪಾರ್ಮರ್ ನಿಂದ ಅಪಾಯ ಉಂಟಾಗುವ ಎಲ್ಲಾ ಸಾಧ್ಯತೆಗಳು ಇದ್ದರೂ ಸಹ ಇದಕ್ಕೂ ತಮಗೂ ಯಾವುದೇ ಸಂಬಂಧ ಇಲ್ಲ ಎಂಬಂತೆ ಅಲ್ಲಿನ ವೈದ್ಯಾಧಿಕಾ–ರಿಗಳ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ತಕ್ಷಣವೇ ಉಪವಿಭಾಗದ ಆಸ್ಪತ್ರೆಯ ಆಡಳಿತ ಅಧಿಕಾ–ರಿಗಳು ಹಾಗೂ ವೈದ್ಯ ಸಿಬ್ಬಂದಿ ವರ್ಗದವರು ಎಚ್ಚೆತ್ತುಕೊಂಡು ಕುಸಿತಗೊಂಡ ಹಾಗೂ ವಾಲಿದ ಕಾಂಪೌಂಡ್ ನಿರ್ಮಾಣಕ್ಕೆ ಮುಂದಾಗುವುದರ ಜೊತೆಗೆ ಮುಂದಾಗುವ ಅನಾಹುತವನ್ನು ತಪ್ಪಿಸುತ್ತಾರೆ ಇಲ್ಲವೋ ಕಾದು ನೋಡಬೇಕಾಗಿದೆ.

## ಗೋಗೇರಿ ಗ್ರಾಮದಲ್ಲಿ ನೂತನ ಪಿಯುಸಿ ಕಾಲೇಜು ಆರಂಭ: ಗ್ರಾಮಸ್ಥರಲ್ಲಿ ಹರ್ಷ



ಅ.ಶ. ಸುದ್ದಿ ಗಜೇಂದ್ರಗಡ

**ಗಜೇಂದ್ರಗಡ: ಸಮೀಪದ ಗೋಗೇರಿ** ಗ್ರಾಮದಲ್ಲಿ ನೂತನವಾಗಿ ವಾಣಿಜ್ಯ ವಿಭಾಗದ ಪಿಯುಸಿ ಕಾಲೇಜು ಪ್ರಾರಂಭವಾಗಿರುವುದು ಗ್ರಾಮೀಣ ವಿದ್ಯಾರ್ಥಿಗಳಿಗೆ **ವರದಾನವಾಗಿದೆ. ಈ ಬೆಳವಣಿಗೆಯ ಬಗ್ಗೆ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.**

ಈ ಕುರಿತು ನಡೆದ ಸಮಾರಂಭದಲ್ಲಿ ಮಾತನಾಡಿದ ವಕೀಲರು ಹಾಗೂ ಶಿಕ್ಷಣ ಪ್ರೇಮಿ ಕೆ.ಎಸ್. ಕೊಡತಗೇರಿ ಅವರು, "ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಪಟ್ಟಣಗಳಿಗೆ ಅಲೆಯುವ ಸ್ಥಿತಿ ಇತ್ತು. ಈಗ ನಮ್ಮ ಗ್ರಾಮದಲ್ಲೇ ಕಾಲೇಜು ಪ್ರಾರಂಭವಾಗಿರುವುದು ಶೈಕ್ಷಣಿಕವಾಗಿ ದೊಡ್ಡ ಸಾಧನೆಯಾಗಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು" ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಟಿ.ಸಿ. ನಾಗನೂರ, ಆಯ್.ಎಚ್. ಬಾಗವಾನ, ಎಂ.ಜೆ. ಗಾರಗಿ, ಕಟ್ಟೆಪ್ಪ ಮಾದರ, ಶಿಕ್ಷಕರಾದ ಪೂಜಾರ, ಬಸವರಾಜ ಮಾದರ, ಕಳಕಪ್ಪ ಸೂಡಿ ಹಾಗೂ ಕಾಲೇಜಿನ ಪ್ರಾಚಾರ್ಯರಾದ ಬಸಪ್ಪ ಜೆ. ಸೇರಿದಂತೆ ಗ್ರಾಮದ ಗಣ್ಯರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ?ಗ್ರಾಮದಲ್ಲಿ ಪಿಯುಸಿ ಕಾಲೇಜು ಆರಂಭವಾದ ಹಿನ್ನೆಲೆಯಲ್ಲಿ ಗ್ರಾಮಸ್ಥರು ಸಂತಸ ವ್ಯಕ್ತಪಡಿಸಿದ್ದು, ಈ ಕ್ರಮವು ಸ್ಥಳೀಯ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಹೊಸ ಆಯಾಮ ನೀಡಲಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

## ಗಮನಿಸಿ: ಇದು ಕೇವಲ ದಾರವಲ್ಲ, ಸಾರ್ವಜನಿಕರ ಪಾಲಿನ 'ಮೃತ್ಯುಪಾಶ'!

ಅ.ಶ. ಸುದ್ದಿ ಗದಗ

**ಗದಗ: ಇತ್ತೀಚಿನ ದಿನಗಳಲ್ಲಿ ಪತಂಗ (ಗಾಳಿಪಟ) ಹಾ–ರಿಸಲು ಬಳಸಲಾಗುವ ಪ್ಲಾಸ್ಟಿಕ್ ದಾರಗಳು (ಮಾನವ ನಿರ್ಮಿತ ನೈಲಾನ್ ದಾರ ಅಥವಾ ಚೈನೀಸ್ ಮಾಂಜಾ) ಸಾರ್ವಜನಿಕರ ಹಾಗೂ ಮೂಕ ಪ್ರಾಣಿಗಳ ಪಾಲಿಗೆ ಮೃತ್ಯುಕೂಪವಾಗಿ ಪರಿಣಮಿಸುತ್ತಿವೆ. ಅತ್ಯಂತ ಹ–ರಿತವಾಗಿರುವ ಈ ದಾರಗಳು ಎಳೆವಯಸ್ಸಿನ ಮಕ್ಕಳು, ದ್ವಿಚಕ್ರ ವಾಹನ ಸವಾರರು ಮತ್ತು ಪಕ್ಷಿಗಳ ಜೀವಕ್ಕೆ ಕಂಟಕವಾಗಿದ್ದು, ತಕ್ಷಣವೇ ಇದರ ಬಳಕೆಯನ್ನು ನಿಯಂತ್ರಿಸಬೇಕೆಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.**

ಅಪಾಯದ ಮುಖಗಳು: ಈ ಮಾರಕ ದಾರ ಏಕೆ ಬೇಡ? ಕುತ್ತಿಗೆ ಸೀಳುವಷ್ಟು ಹರಿತ ಈ ದಾರ: ಸಾಮಾನ್ಯವಾಗಿ ನೂಲಿನಂತೆ ಈ ಪ್ಲಾಸ್ಟಿಕ್ ದಾರಗಳು ಸುಲಭವಾಗಿ ತುಂಡಾಗುವುದಿಲ್ಲ. ಇವು ಚರ್ಮವನ್ನೇ ಸೀಳುವಷ್ಟು ಹರಿತವಾಗಿರುತ್ತವೆ. ಬೈಕ್ ಸವಾರರ ಕುತ್ತಿಗೆ ಮತ್ತು ಮುಖದ ಭಾಗಕ್ಕೆ ಈ ದಾರಗಳು ಸಿಲುಕಿ ಗಂಭೀರ ಗಾಯಗಳಾಗಿರುವ,ಬಗ್ಗೆ ಮತ್ತು ಸಾವು ಸಂಭವಿಸಿದ ಪ್ರಕರಣ ಜಿಲ್ಲೆಯಲ್ಲಿ ಈ ಹಿಂದೆ ವರದಿಯಾಗಿದೆ.

**ಮೂಕ ಹಕ್ಕಿಗಳು:** ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಅಡ್ಡಾದಿಡ್ಡಿ ಬಿದ್ದಿರುವ ಈ ದಾರಗಳಿಗೆ ಸಿಲುಕಿದಾಗ ಅವುಗಳ ರೆಕ್ಕೆಗಳು ಕತ್ತರಿಸಿ ಹೋಗುತ್ತವೆ.

ಪರಿಸರಕ್ಕೆ ಶಾಶ್ವತ ಶಾಪ: ಈ ಪ್ಲಾಸ್ಟಿಕ್ ದಾರಗಳು ನೂರಾರು ವರ್ಷಗಳಾದರೂ ಮಣ್ಣಿನಲ್ಲಿ ಕರಗುವುದಿಲ್ಲ. ಇದರಿಂದ ಮಣ್ಣಿನ ಫಲವತ್ತತೆ ಕೆಡುವುದಲ್ಲದೆ, ನಗರದ ಸ್ವಚ್ಛತೆಗೂ ದೊಡ್ಡ ಧಕ್ಕೆಯುಂಟಾಗುತ್ತಿದೆ. ಅಧಿಕಾರಿಗಳೇ ಗಮನಿಸಿ: ಸಾರ್ವಜನಿಕರು ಮತ್ತು ಪರಿಸರ ಪ್ರೇಮಿಗಳ ಪ್ರಮುಖ ಬೇಡಿಕೆಗಳು,





1).ತಕ್ಷಣದ ದಾಳಿ ಅಗತ್ಯ: ನಗರದ ಅಂಗಡಿ–ಮುಂಗಟ್ಟುಗಳಲ್ಲಿ ಕದ್ದುಮುಚ್ಚಿ ಮಾರಾಟವಾಗುತ್ತಿರುವ ಚೈನೀಸ್ ಮಾಂಜಾ ಹಾಗೂ ನೈಲಾನ್ ದಾರಗಳನ್ನು ಜಪ್ತಿ ಮಾಡಲು ಅಧಿಕಾರಿಗಳು ತಕ್ಷಣವೇ ವಿಶೇಷ ಕಾರ್ಯಾಚರಣೆ ನಡೆಸಬೇಕು.

2). ನಿಷೇಧಿತ ದಾರಗಳನ್ನು ಮಾರಾಟ ಮಾಡುವ ವ್ಯಾಪಾರಿಗಳ ಮೇಲೆ ಕೇವಲ ದಂಡ ವಿಧಿಸುವುದಷ್ಟೇ ಅಲ್ಲದೆ, ಅವರ ಲೈಸೆನ್ಸ್ ರದ್ದುಪಡಿಸುವಂತಹ ಕಠಿಣ ಕಾನೂನು ಕ್ರಮ ಜರುಗಿಸಬೇಕು.

3.)ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಅಗತ್ಯ: ಯುವಕರು ಮತ್ತು ಮಕ್ಕಳಲ್ಲಿ ಈ ದಾರದ ದುಷ್ಪ–ರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು ನಗರಸಭೆ ಹಾಗೂ ಸಂಬಂಧಪಟ್ಟ ಇಲಾಖೆ ಮುಂದಾಗಬೇಕು.

ಸಾರ್ವಜನಿಕರಲ್ಲಿ ವಿನಂತಿ: "ಅಪಾಯಕಾರಿ ಪ್ಲಾಸ್ಟಿಕ್ ದಾರಗಳನ್ನು ದೂರವಿಡಿ, ಅಮೂಲ್ಯ ಜೀವಗಳನ್ನು ರಕ್ಷಿಸಿ. ಗಾಳಿಪಟ ಹಾರಿಸಲು ಸಾಂಪ್ರದಾಯಿಕ ಹತ್ತಿ (ಕಾಟನ್) ದಾರಗಳನ್ನೇ ಬಳಸಿ." ಎಂದು ಸುದರ್ಶನ ಚಕ್ರ ಯುವ ಮಂಡಳ ಅಧ್ಯಕ್ಷ,ಹಾಗೂ ಪರಿಸರ ಪ್ರೇಮಿ, ರಾಘವೇಂದ್ರ ಹಬೀಬ ವಿನಂತಿಸಿದ್ದಾರೆ.ಅ

AJATHA SHATHRU KANNADA DAILY MORNING Editor, Printer, Publisher, & Owned by : PRADEEP KUMAR H.No. 2/77/1, Godi nilaya, Halli street, 1st ward,Mainahalli, Koppal-583238, Dist : Koppal- Karnataka Printed at : Goditechnologies, H.No. 2/77/1, Godi nilaya, Halli street, 1st ward,Mainahalli, Koppal-583238, Karnataka